(ಶ್ರೀ ಹೆಚ್. ಬಿ. ಕೆಂಚೇಗೌಡ)

ಇದೆ. ಆದರೆ ಹಳ್ಳಿಯ ಜನರಿಗೆ ಆ ಶಕ್ತಿಯೂ ಇಲ್ಲ. ಎಷ್ಟು ಜನರಿಗೆ ಇಂದು ವೆಸ್ಟೆಂಡ್ ಹೋಟೆಲ್‌ನಲ್ಲಿ ಮತ್ತು ಅಶೋಕಾ ಹೋಟೆಲ್‌ನಲ್ಲಿ ಇಳಿದುಕೊಳ್ಳುವುದಕ್ಕೆ ಶಕ್ತಿ ಇದೆ, ಎಷ್ಟು ಜನರಿಗೆ ದೊಡ್ಡ ದೊಡ್ಡ ಕಾರಿನಲ್ಲಿ ಓಡಾಡುವುದಕ್ಕೆ ಶಕ್ತಿ ಇದೆ, ಎಷ್ಟು ಜನರಿಗೆ ದೊಡ್ಡ ದೊಡ್ಡ ಬಂಗಲೆಗಳಲ್ಲಿ ವಾಸ ಮಾಡುವುದಕ್ಕೆ ಶಕ್ತಿ ಇದೆ ಎಂದು ನಾನು ಕೇಳುತ್ತಿದ್ದೇನೆ. ಎಷ್ಟು ಜನ ಹಳ್ಳಿಯ ರೈತರಿಗೆ ನುಂದರ ಭಾನಗಳಲ್ಲಿ ವಾಸ ಮಾಡುವುದಕ್ಕೆ ಸಾಧ್ಯವಿದೆ ಎಂದು ಕೇಳುತ್ತೇನೆ. ಇಂದು ಸಮಾಜವಾದವನ್ನು ಹೇಳುವವರು ಮೇರ್ಮೆಟ್ಟದ ಹೇವನವನ್ನು ನಡೆಸುತ್ತಿದ್ದಾರೆ. ಅವರ ಮನೆಯ ಮಟ್ಟಕ್ಕೆ ಮಾತ್ರ ಎಲ್ಲ ರೀತಿಯ ಸೌಕರ್ಯವನ್ನು ಇಟ್ಟುಕೊಂಡಿರುತ್ತಾರೆ. ಪಟ್ಟಣದಲ್ಲಿರುವ ಹೆಂಗಸರಿಗೆ ಇರುವ ಸೌಕರ್ಯಗಳು ಹಳ್ಳಿಯಲ್ಲಿರತಕ್ಕಂಥ ಹೆಂಗಸರಿಗೆ ಇಲ್ಲವಾಗಿದೆ. ಪಟ್ಟಣದಲ್ಲಿರುವವರು ಅಡಿಗೆ ಮಾಡಲು ಅಡಿಗೆಯವರನ್ನು ಇಟ್ಟುಕೊಂಡಿರುತ್ತಾರೆ. ಆದರೆ ಹಳ್ಳಿಯ ರೈತನ ಹೆಂಡತಿ ಅಡಿಗೆ ಮಾಡಲು ಬೆಳಿಗಿನಜಾವ ನಾಲ್ಕು ಗಂಟೆಗೆ ಎದ್ದೇಳಬೇಕು.

Mr. DEPUTY SPEAKER.—How much time does the hon. member require ?

Sri H. B. KENCHE GOWDA.—I want atleast another one hour.

Mr. SPEAKER.—Then he may continue his speech tomorrow. Now we shall take up the next subject *i.e.*, the discussion on a matter of urgent public importance for short duration under rule 51. I call upon the hon. Leader of the Opposition to raise the discussion.

Discussion on a Matter of urgent Public Importance for short duration :

re : Eviction orders of Government on the villagers of Hagedahalli, Channagiri Taluk.

†ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಉಪಾಧ್ಯಕ್ಷರೇ, ಈ ದಿವಸ 59ನೇ ನಿಯಮದ ಮೇರೆಗೆ ಈ ಒಂದು ಪ್ರಾಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಏನು ಒಂದು ಅವಕಾಶ ಕೊಟ್ಟಿದ್ದೀರಿ, ಅದಕ್ಕೆ ಮೊದಲು ನಾನು ತಮಗೆ ಉಪಕೃತನಾಗಿದ್ದೇನೆ. 1961ನೇ ಇನವಿಯಲ್ಲಿ ಚೆನ್ನಗಿರಿ ತಾಲ್ಲೂಕ್, ಕಸಬ ಹೋಬಳಿ, ಹಗೇದಹಳ್ಳಿ ಗ್ರಾಮದಲ್ಲಿ ನುಮಾರು 59 ಜನರಿಗೆ ದರಖಾಸ್ತಿನಲ್ಲಿ 10 ರೂಪಾಯಿಗಳ ಅಪ್‌ಸೆಟ್ ಪ್ರೈಸ್‌ನಲ್ಲಿ ಭೂಮಿಯನ್ನು ಸರ್ಕಾರದವರು ಕೊಟ್ಟಿದ್ದರು. ಈ ನಮಾಜವಾದೀ ಸರ್ಕಾರ ಆತಳಿತಕ್ಕೆ ಬಂದು 9 ತಿಂಗಳಾಯಿತು. ಇವರು ಆಡಳಿತಕ್ಕೆ ಬಂದಮೇಲೆ ಜನರಿಗೆ ಕೊಟ್ಟ ಪ್ರಥಮ ವರಪ್ರಸಾದವೆಂದರೆ ಹಗೇದಹಳ್ಳಿಯ ಹಗರಣ. ಆತಳಿತ ಪಕ್ಷದ ಎರಡು ಗುಂಪುಗಳ ಗುದ್ದಾಟ ಇಲ್ಲಿ ನಡೆದಿದೆ. ಯಾರ ಶಕ್ತಿ ಎಷ್ಟು ಇದೆ ಎಂಬ ಬಗ್ಗೆ ಅಲ್ಲಿ ಗುದ್ದಾಟವಾಗುತ್ತಿದೆ. ದಲಿತವರ್ಗದ ಜನರ ಮೇಲೆ ಅದರಲ್ಲೂ ದಲಿತ ವರ್ಗದ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಅತ್ಯಾಚಾರ ನಡೆದಿದೆ.

ಶ್ರೀ ಪಾಟೀಳ್ ನಾಗರಾಜ್:—ಈ ಸರ್ಕಾರದವರ ದೌರ್ಜನ್ಯ ಬರೀ ಹೆಣ್ಣುಮಕ್ಕಳ ಮೇಲೆಯೇ ಆಗುತ್ತಿದೆ ?

ಶ್ರೀ ಎಚ್. ಡಿ. ದೇವೇಗೌಡ.—ಯಾವುದೇ ಒಂದು ಹಾನ್ಯ ಪ್ರವೃತ್ತಿಯಿಂದ ನಾನು ಈ ಮಾತನ್ನು ಹೇಳುತ್ತಿಲ್ಲ. ಮತ್ತು ಆ ರೀತಿ ಹೇಳಿ ಈ ನಭೆಯ ಕಾಲವನ್ನು ಅನಾವಶ್ಯಕವಾಗಿ ತಗೆದುಕೊಳ್ಳಬೇಕೆಂದೂ ನಹ ನಾನು ಇಲ್ಲ. ಯಾರು ಇಪೊತ್ತು ಸರ್ಕಾರದ ಆಶ್ರಯವನ್ನು ಪಡೆಯುವುದಕ್ಕೆ, ಸರ್ಕಾರದ ಬೆಂಬಲವನ್ನು ಪಡೆಯುವುದಕ್ಕೆ ಅನಕ್ತರಾಗಿದ್ದಾರೋ ಅಂತಹವರ ಮೇಲೆ ನಡೆಯುವ ದೌರ್ಜನ್ಯ, ಅತ್ಯಾಚಾರವನ್ನು ಸರ್ಕಾರದ ಗಮನಕ್ಕೆ ತರಬೇಕೆಂಬ ಇಚ್ಛೆ ನನಗಿದೆ. ತಮಗೂ ಕೂಡ ತಂತಿ ಮೂಲಕ ತಮ್ಮಪಕ್ಷದವರು ಆಲ್ಲಿಯ ವಿಷಯವನ್ನು ತಿಳಿಸಿರಬಹುದು. ಆದರೂ

ನಾನು ಎಲ್ಲವನ್ನೂ ವಿವರವಾಗಿ ಹೇಳುತ್ತೇನೆ. 1951ನೇ ಇಸವಿಯಲ್ಲಿ ಸರ್ವೆ ನಂಬರ್ 3ರಲ್ಲಿ ಹಗ್ಗೇಡಹಳ್ಳಿಯ 59 ಜನ ಒಡ್ಡರಿಗೆ ಮತ್ತು ದಾನರಒಡ್ಡರಿಗೆ ಸರ್ಕಾರದವರು 200 ಎಕರೆ ಭೂಮಿಯನ್ನು ಪಂಜೂರು ಮಾಡಿದರು. ಈ 59 ಜನ ಕುಟುಂಬದವರು ತಾ॥ 11-3-1963ರಲ್ಲಿ ಸಾಯಿಕ್ಕ ಬೇಸಾಯ ಸಹಕಾರಸಂಘವನ್ನು ಸ್ಥಾಪಿಸಿ ರಿಜಿಸ್ಟರ್ ಮಾಡಿಸಿದರು. ನಮ್ಮೂರು 156 ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡಲು ಸರ್ಕಾರದವರು ಸಹಾಯಧನವನ್ನು ಸಹ ಕೊಟ್ಟರು. ನಮ್ಮೂರು 91 ಸಾವಿರ ರೂಪಾಯಿಗಳವರೆಗೆ ಆರ್ಥಿಕ ಸಹಾಯವನ್ನು ಸರ್ಕಾರ ಕೊಟ್ಟಿದೆ. ಸರಕಾರದಿಂದ ಟ್ರಾಕ್ಟರು ಕೊಳ್ಳುವುದಕ್ಕೆ ಮತ್ತು ಬೇರೆ ಬೇರೆ ಸವಲತ್ತುಗಳನ್ನು ಪಡೆಯುವುದಕ್ಕೆ ಹಣವನ್ನು ಕೊಡುತ್ತಿದ್ದಾರೆ. ಇದರ ವಿವರಗಳನೆಲ್ಲಾ ಇಲ್ಲಿ ಕೊಡುವುದಕ್ಕೆ ಹೇಗಾಗುವುದಿಲ್ಲ. ಇದಾದ ಮೇಲೆ 1971ರ ಚುನಾವಣೆಯಾಯಿತು. ಇದರಲ್ಲಿ ನದನ್ಯರ ಹಾಗೂ ಇನ್ನಿತರ ನದನ್ಯರ ಹಾಗೂ ರಾಜ್ಯಪಾಲರ ಹೆಸರನ್ನು ಕೊಟ್ಟಿದ್ದಾರೆ. ತಾವು ಇಲ್ಲ ಹೆಸರುಗಳನ್ನು ಹೇಳುವುದು ಅನುಚಿತ ಎಂದು ನಿನ್ನೆ ಹೇಳಿರುವುದರಿಂದ ನಾನು ಯಾವ ಹೆಸರನ್ನೂ ಹೇಳಲು ಹೋಗುವುದಿಲ್ಲ. ಇಲ್ಲಿ ಒಬ್ಬರು ಪಾರ್ಲಮೆಂಟ್ ನದಸ್ಯರು ಎಂದು ಹೇಳಬಹುದು. ಅನಂತರ ಇಲ್ಲಿ ಒಂದು ರಾಜಕೀಯ ಪ್ರಾರಂಭವಾಯಿತು. ಈ ಸಂಘದಲ್ಲಿ ಇದ್ದ ಬಡವರ ಮೇಲೆ ಗುಂಡಿನ ಪ್ರಹಾರವಾಯಿತು. ಈ ಸಂಘವನ್ನು ಮೊದಲು ಸೂಪರ್‌ಸೀಡ್ ಮಾಡಬೇಕು ಎಂದು ಇದಕ್ಕೆ ತಮ್ಮ ಎಲ್ಲ ಪ್ರಭಾವವನ್ನು ಬೀರಿ 7-10-71ರಲ್ಲಿ ಈ ಸಂಘವನ್ನು ಸೂಪರ್‌ಸೀಡು ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಸಹಕಾರ ತತ್ವದ ಮೇಲೆ ಕೋ ಆಪರೇಟಿವ್ ಫಾರ್ಮಿಂಗ್ ಸೊಸೈಟಿಗಳು ಉತ್ಪನ್ನವಾಗಿ ಕೆಲಸ ಮಾಡಿರುತ್ತದೆ. ಆದರೆ ಇದು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಂತಹ ಒಂದು ಸಂಸ್ಥೆ. ಇದರ ಬಗ್ಗೆ ಈಗಾಗಲೇ ರಿಪೋರ್ಟ್ ಕೂಡ ಬಂದಿದೆ. ಇದನ್ನು ಸೂಪರ್‌ಸೀಡು ಮಾಡಲು ಕಾರಣ ಏನೆಂದರೆ ಇವರು ಸರಕಾರಕ್ಕೆ ಕೊಡಬೇಕಾದ ಡ್ಯೂಸ್‌ಗಳನ್ನು ಕೊಟ್ಟಿಲ್ಲ ಎನ್ನುವುದರ ಕಾರಣದ ಮೇಲೆ ಇದನ್ನು ಸೂಪರ್‌ಸೀಡ್‌ಮಾಡಿ ಈಗ ಇಲ್ಲಿಗೆ ಒಬ್ಬರು ಅಧಿಕಾರಿಗಳನ್ನು ಅಡ್ಮಿನಿಸ್ಟ್ರೇಟರ್ ಎಂದು ನೇಮಕ ಮಾಡಿದ್ದಾರೆ. ಈ ಅಡಳಿತಾಧಿಕಾರಿ ಬಂದ ಮೇಲೆ ಈ ಸಂಘದ ನದನ್ಯರೆಲ್ಲಾ ಒಂದು ತೀರ್ಮಾನ ಮಾಡಿ ಸರಕಾರಕ್ಕೆ ಕೊಡಬೇಕಾದ ಡ್ಯೂಸ್‌ಗಳ ಬಗ್ಗೆ ಅವರಲ್ಲಿರುವ 150 ಎಕರೆಯಲ್ಲಿ ಬೆಳೆದ ಕ್ರಾಪ್‌ಗಳನ್ನೆಲ್ಲಾ ಒಕ್ಕಣೆಮಾಡಿ ಅದರಿಂದ ಬರುವ ಪ್ರಾಪಿಡ್ಸ್‌ನ್ನು ಪಡೆದು ಅವರ ಸಾಲಕ್ಕೆ ಅಡಜಸ್ಟ್ ಮಾಡಬಹುದು ಎಂದು ರೆಸಲ್ಯೂಷನ್ ಕೂಡ ಮಾಡಿ ಸರಕಾರಕ್ಕೆ ಕಳುಹಿಸಿದ್ದಾರೆ, ಮತ್ತು ಇದರಲ್ಲಿ ರಾಜಕೀಯ ಆರಂಭವಾಯಿತು. ಪ್ರಭಾವವುಳ್ಳ ಕೆಲವರು ಈ ಸಂಘಕ್ಕೆ ನದನ್ಯರಲ್ಲದವರು ತಿನಮೊಗ್ಗಾದ ಕೋ ಆಪರೇಟಿವ್ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರ ಬಳಿ ಹೋಗಿ ಅವರಿಂದ ಸ್ಟೇ ಆರ್ಡರ್‌ತರಿಸಿದ್ದಾರೆ. ಈ ಸಂಘದ ನದಸ್ಯರೆಲ್ಲಾ ಸೇರಿಕೊಂಡು ಒಂದು ನಿರ್ಣಯಮಾಡಿ ಸರಕಾರಕ್ಕೆ ಕಳುಹಿಸಿ ಅವರಂತೆ ಬೆಳೆಯಿಂದ ಬರುವ ಪ್ರಾಪಿಡ್ಸ್‌ನ್ನು ಇದಕ್ಕೆ ಅಡಜಸ್ಟ್‌ಮಾಡಬೇಕು ಎಂದು ಹೇಳುವ ದಾಖಲಾತಿಗಳೆಲ್ಲಾ ನನ್ನ ಬಳಿ ಇವೆ. ಬೇಕಾದರೆ ಅದನ್ನು ತಮ್ಮ ಕಡೆಗೆ ಕಳುಹಿಸುತ್ತೇನೆ. ಇದಾದ ಮೇಲೆ ಇನ್ನು ಕೆಲವ್ಯಜನರು ಇಲ್ಲಿ ಬೆಳೆದಿರುವ ಬೆಳೆಯನೆಲ್ಲಾ ಲೂಟಿ ಮಾಡಬೇಕೆಂದು ಪ್ರಯತ್ನ ಮಾಡಿದ್ದಾರೆ. ಇದಕ್ಕೆ ಅಡ್ಮಿನಿಸ್ಟ್ರೇಟರು ಪತ್ರದ ಮೇಲೆ 25-9-72ರಲ್ಲಿ ಇಲ್ಲಿನ ಕೆಲವರು ಸಿವಿಲ್ ಕೋರ್ಟಿಗೆ ಹೋಗಿ ಅವರಿಂದ ಒಂದು ಇಂಜಕ್ಷನ್ ಆರ್ಡರು ಕೂಡ ಪಡೆದುಕೊಂಡು ಬಂದಿದ್ದಾರೆ. ಇದರಲ್ಲಿ ಸಂಘದ ನದಸ್ಯರಲ್ಲದವರ ಹಿತಾಸಕ್ತಿಗಳೂ ಇದ್ದಾರೆ. ಇವರು ಆಡಳಿತದ ಮೇಲೆ ಪ್ರಭಾವ ಬೀರಿ ಅಡಷ್ಟ್ಮೆಂಟಿಗೆ ತೊಂದರೆ ಕೊಡಲು ಪ್ರಯತ್ನ ಮಾಡಿದ್ದಾರೆ ಮತ್ತು ಕೋರ್ಟನಲ್ಲಿ ಇಂಜಕ್ಷನ್ ಕೂಡ ಪಡೆದಿದ್ದಾರೆ. ಅದರ ಕೇನು ನಂಬರು ಓ.ಎಸ್. 03-72 ಎಂದು ಇದೆ. ಯಾವಾಗ ಈ ಸೊಸೈಟಿಯನ್ನು ಸೂಪರ್‌ಸೀಡು ಮಾಡಿದರೋ ಈ ಸಂಘದ ಜಮೀನು ಮೇಲೆ ನಮಗೆ ಅಧಿಕಾರ ಇದೆ, ಇದರಲ್ಲಿ ರಾಜಕೀಯ ಮಾಡಿಕೊಂಡು ಪೋಲೀಸಿನವರೊಡನೆ ಶಾಮೀಲು ಮಾಡಿಕೊಂಡು ಇಲ್ಲರುವ ನದನ್ಯರನ್ನು ಹೊರಗೆ ದಬ್ಬಬೇಕು ಎಂದು ಇಲ್ಲಿಗೆ ಒಬ್ಬರು ಪೋಲೀಸು ಸಬ್‌ಇನ್ಸ್‌ಪೆಕ್ಟರನ್ನು ಕರೆದುಕೊಂಡು ಬಂದರು. ಇದು 25-9-72 ರಲ್ಲಾಯಿತು. ಇಲ್ಲಿ ಕೋರ್ಟು ಇಂಜಕ್ಷನ್ ಆರ್ಡರು ಇದ್ದರೂ ಅದನ್ನು ಡಿಸ್‌ಬೇ ಮಾಡಿ ಇವರ ಮೇಲೆ ಅಕ್ರಮವಾಗಿ ಅಕ್ರಮಣ ಮಾಡಲು ಪ್ರಯತ್ನ ಮಾಡಿದ್ದಾರೆ ಎಂದು ಸರಕಾರದಿಂದ ನೇಮಕ ಮಾಡಿರುವ ನಿಮ್ಮ ಅಡ್ಮಿನಿಸ್ಟ್ರೇಟರವರೇ ಚನ್ನಗಿರಿ ತಾಶೀಲುದಾರರಿಗೆ ಪತ್ರ ಬರೆದಿದ್ದಾರೆ. 28-9-72 ರಲ್ಲಿ ಈ ಪತ್ರ ಬರೆದಿದ್ದಾರೆ. ಇದರಲ್ಲಿ ಇಲ್ಲಿ ಏನೇನು ಅಕ್ರಮಗಳಾಗಿವೆ, ಅವನ್ನೆಲ್ಲಾ ವಿಶದವಾಗಿ ಬರೆದಿದ್ದಾರೆ. ಅದೇ ರೀತಿ ಇಲ್ಲಿನ ರೈತರು ಮುಖ್ಯ ಮಂತ್ರಿಗಳಿಗೆ ಹಾಗೂ ರಾಜ್ಯಪಾಲರಿಗೂ ಪತ್ರಬರೆದಿದ್ದಾರೆ. ಪೋಲೀಸ್ರಿಂದ ತುಂಬ ಕಿರುಕುಳಗಳಾಗುತ್ತಿವೆ ಎಂದೂ ಅವರು ಬರೆದಿದ್ದಾರೆ. ಇದಕ್ಕೆ ಮುಖ್ಯ ಮಂತ್ರಿಗಳ ಆಫೀಸಿನಿಂದ ಇಲ್ಲಿನ ಹೊಂ ಡಿಪಾರ್ಟ್‌ಮೆಂಟ್ ಅಂಡರ್‌ಸೆಕ್ರಟರಿಗಳು 19-6-72ರಲ್ಲಿ ಉತ್ತರ ಬರದು ಇದರ ಬಗ್ಗೆ ತಕ್ಕ ಕ್ರಮ ತಗೆದುಕೊಳ್ಳಲಾಗುತ್ತದೆ ಎಂದೂ

(ಶ್ರೀ ಎಚ್. ಡಿ. ದೇವೇಗೌಡ)

ಬರೆದಿದ್ದಾರೆ. ಇನ್ನೊಂದು ಅಕನಾರೆಡ್ಜ್‌ಮೆಂಟು 5-7-72 ರಲ್ಲಿ ಹೊಂ ಡಿಪಾರ್ಟ್‌ಮೆಂಟು ಅಂಡರ್ ಸೆಕ್ರಟರಿಗಳಿಂದಲೂ ಬಂದಿದೆ. ಮತ್ತು ಅವರು ಇದರ ಬಗ್ಗೆ ಐ.ಜಿ.ಪಿ. ಕಡೆಗೆ ಬರೆಯಲಾಗಿದೆ ಎಂದು ತಿಳಿಸಿದ್ದಾರೆ. ಈ ಮಧ್ಯದಲ್ಲಿ ಏನಾಗಿದೆ ಎಂದರೆ ನಮ್ಮ ಸರಕಾರದವರು ಇಲ್ಲಿರುವ ಒಬ್ಬ ರೈತನಿಗೆ ಮಂಜೂರಾತಿ ವಜಾ ಮಾಡಲಾಗುತ್ತೆ ಎಂದು ಒಂದು ಷೋಕಾಸು ನೋಟೀಸು ಕೊಟ್ಟಿದ್ದಾರೆ. ಇದು ರೆವೆನ್ಯೂ ಇಲಾಖೆ ಮೂಲಕ ಎಂದರೆ ಚನ್ನಗಿರಿ ತಾಲ್ಲೂಕು ತಹಶೀಲುದಾರರ ಆಫೀಸಿನ ಮೆಮೊ ನಂಬರು ಐ ಎನ್ ಡಿ ಐ ಆರ್ 43-72-73 ಡೇಟೆಡ್ 7-10-72ರಲ್ಲಿ ಚನ್ನಗಿರಿ ತಾಲ್ಲೂಕು ಕಸಬಾ ಹೋಬಳಿ ಹಗರಿನಹಳ್ಳಿ ಕರಿಯಪ್ಪ ಬಿನ್ ತಿಮ್ಮಪ್ಪನವರಿಗೆ ಎಂದು ಷೋಕಾಸ್ ನೋಟೀಸನ್ನು ಕೊಟ್ಟಿದ್ದಾರೆ, ಇದರಂತೆ ಅವರಿಗೆ ಹಿಂದೆ ಮಂಜೂರಾತಿ ನೀಡಿದ್ದ ಜಮೀನಿನ ಮಂಜುರಾತಿಯನ್ನು ವಜಾ ಮಾಡಲಾಗಿದೆ ಎಂದು ಕೊಟ್ಟಿದ್ದಾರೆ. ಇದನ್ನು ಕೊಟ್ಟಿರುವುದು ಹತ್ತು, ಹನ್ನೊಂದು ವರ್ಷಗಳಾದ ಮೇಲೆ ಇದನ್ನು ಅಕ್ರಮವಾಗಿ ಕೊಡಲಾಗಿದೆ, ಇದರ ಮೇಲೆ ರಾಜಕೀಯ ಗುದ್ದಾಟ ಕೂಡ ಆರಂಭವಾಗಿದೆ. ಇದಾದ ಮೇಲೆ ಸತ್ತನೆ ತಿಂಗಳು 30ನೇ ತಾರೀಖಿನ ದಿವಸ ಇಲ್ಲಿನ ಅಧಿಕಾರಿಗಳು ವ್ಯೆಯುಕ್ತಿಕವಾಗಿ ಅಧಿಕಾರವನ್ನು ದುರುಪಯೋಗ ಮಾಡಿದ್ದಾರೆ. ಇಲ್ಲಿನ ಕೆಲವು ಪೋಲೀಸು ಅಧಿಕಾರಿಗಳು ರಾತ್ರಿ ಹತ್ತು ಗಂಟೆಯ ವೇಳೆಯಲ್ಲಿ ಈ ಬಡ ರೈತರ ಮನೆಗಳಿಗೆ ಹೋಗಿ ನುಗ್ಗಿ ಇವರಿಗೆ 7-10-72 ರಲ್ಲಿ ಎವಿಕ್ಷನ್ ಆರ್ಡರಾಗಿದೆ ಎಂದು ಇವರನ್ನು ಹೆದರಿಸಿ ಇವರ ಮನೆಗಳಿಗೆ ಹೋಗಿ ನುಗ್ಗಿ ಅವರನ್ನು ಬೂಡ್ಸು ಕಾಲುಗಳಲ್ಲಿ ಹೊಡೆದು ಮತ್ತು ಕೆಲವು ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಕೂಡ ಮಾಡಿದರು ಎಂದು ದೂರನ್ನು ಕೂಡ ಕೊಡಲಾಗಿದೆ.

5-00 P. M.

ಅದರ ಮೇಲೆ ಜಿಲ್ಲಾಧಿಕಾರಿಗಳು ಮತ್ತು ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಅವರು ಸ್ಥಳಕ್ಕೆ ಭೇಟಿಕೊಟ್ಟು 3-11-72 ರಂದು ಎರಡು ಮೂರು ಜನ ಕಾನ್‌ಸ್ಟೇಬಲುಗಳನ್ನು ಸ್ಥಳದಲ್ಲಿಯೇ ನಸ್ಪೆಂಡ್ ಮಾಡಿದ್ದಾರೆ. ಯಾರು ಮಾನ ಭಂಗಕ್ಕೆ ತುತ್ತಾಗಿದ್ದರು, ಯಾರುಬೂಟ್ಸ್ ಕಾಲಿನ ಏಟನ್ನು ತಿಂದರು. ಯಾವ ಪ್ರಾಯಸ್ಥ ಹೆಣ್ಣು ಮಕ್ಕಳ ಮೇಲೆ ಅಧಿಕಾರಿಗಳ ಕಾಮುಕ ದೃಷ್ಟಿ ಬಿತ್ತು ಅವರುಗಳು ತಪ್ಪಿಸಿಕೊಂಡು ಬಂದು ಶಿವಮೊಗ್ಗ ಜಿಲ್ಲಾಧಿಕಾರಿಗಳ ಮತ್ತು ಪೋಲೀಸ್ ಸೂಪರಿಂಟೆಂಡೆಂಟ್ ಆಫೀಸಿನ ಮುಂದೆ, ಶ್ರೀ ಎನ್. ಕೆ. ಸೀತಾರಾಮಯ್ಯಂಗಾರ್ ಮತ್ತು ಎಂ. ಕಲ್ಯಾಣರಾವ್ ಅವರುಗಳ ಮುಖಂಡತ್ವದಲ್ಲಿ, ಆ ಹಿಲ್ಲೆಯ ಪತ್ರಿಕೆಯಲ್ಲಿ ವರದಿಯಾಗಿರುವಂತೆ ಸತ್ಯಾಗ್ರಹವನ್ನು ನಡೆಸಿದ್ದಾರೆ. ಅದರ ಮೇಲೆ ಜಿಲ್ಲಾಧಿಕಾರಿಗಳು ಆ ಜನರಿಗೆ ಭರವಸೆಯನ್ನು ಕೊಟ್ಟು, ಸ್ಥಳಕ್ಕೆ ಧಾವಿಸಿ, ವಿಚಾರಣೆ ಮಾಡಿ ಮೂರು ಜನ ಕಾನ್‌ಸ್ಟೇಬಲರನ್ನು ನಸ್ಪೆಂಡ್ ಮಾಡಿದ್ದಾರೆಂದು ಕೂಡ ವರದಿಯಾಗಿದೆ. ನಾನು ಈ ವಿಷಯವನ್ನು ಪ್ರಸ್ತಾಪ ಮಾಡತಕ್ಕುದರ ಉದ್ದೇಶವಾದರೂ ಇಷ್ಟೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಮತ್ತು ರಾಜ್ಯಪಾಲರಿಗೆ ತಂತಿಯನ್ನು ಕಳುಹಿಸಿರುವವರು ಕೂಡ ಅವರ ಪಕ್ಷದವರೇ. ಈ ಹೊತ್ತು ಈ ಒಂದು ಸಮಸ್ಯೆಯ ವಿಚಾರದಲ್ಲಿ ರಾಜಕೀಯ ಮುಖಂಡರುಗಳ ಜಿಜ್ಞಾಸೆಯಿಂದ ಆ ಬಡಪಾಯಿಗಳ ಮೇಲೆ ಇಂಥ ಪೈಶಾಚಿಕ ಕೃತ್ಯ ಆಗಬಾರದಾಗಿತ್ತು. ಈ ಸರ್ಕಾರ 11 ವರ್ಷವಾದ ಮೇಲೆ 1962ರಿಂದ ಅವರುಗಳು ಸರ್ಕಾರದ ಆದೇಶದ ಪ್ರಕಾರ ಜಮೀನನ್ನು ಕ್ರಮಬದ್ಧವಾಗಿ ಪಡೆದು, ಒಂದು ಸಹಕಾರಿ ಬೇಸಾಯ ಸಂಘವನ್ನು ಮಾಡಿಕೊಂಡು ಅನುಭವಿಸಿಕೊಂಡು ಬಂದಿರತಕ್ಕ ಜನತೆಯ ಮೇಲೆ ಈ ಒಂದು ಅತ್ಯಾಚಾರ ನಡೆಯಬಾರದಾಗಿತ್ತು. ಸರ್ಕಾರ ಮಾಡಿರುವ ಈಗಿನ ಹುಕುಂನಿನಿದೆ ಅದು ವಿವೇಚನೆಯಿಂದ ಕೂಡಿದ ಹುಕುಂ ಅಲ್ಲ. ತಹಸೀಲ್ದಾರರು 27-10-72 ರಂದು ಕೊಟ್ಟಿರುವ ಷೋಕಾಸ್ ನೋಟೀಸಿನಲ್ಲಿ ಸರ್ಕಾರದ ಆದೇಶದ ಮೇಲೆ ಇದನ್ನು ವಜಾ ಮಾಡುತ್ತೇನೆ ಎಂದು ತಿಳಿಸಿ ಇದು ಅರಣ್ಯ ಜಮೀನು ಎಂದು ಗಣನೆಗೆ ಬಂದಿದೆ ಎನ್ನುವ ಕಾರಣವನ್ನು ತೋರಿಸಿದ್ದಾರೆ. ಆದರೆ ಇದು ಸರ್ಕಾರಿ ಬಂಜರು ಜಮೀನು ಎಂದು ರೆವೆನ್ಯೂ ಅಧಿಕಾರಿಗಳು ಕೊಟ್ಟಿರತಕ್ಕ ಸರ್ಟಿಫೈಡ್ ಕಾಪಿಗಳು ಈ ಒಂದು ಸನ್ನಿವೇಶದಲ್ಲಿ ಸರ್ಕಾರ ನಿರ್ಣಯವನ್ನು ತೆಗೆದುಕೊಳ್ಳತಕ್ಕ ಕಾಲದಲ್ಲಿ ಇದರಬಗ್ಗೆ ಸಾಕಷ್ಟು ಮತ್ತು ಸರಿಯಾದ ವಿವರಣೆಯನ್ನು ಪಡೆಯದೆ, ರಾಜಕೀಯ ಒತ್ತಡಕ್ಕೆ ಮಣಿದು ಎಂದು ಬೇಕಾದರೂ ಹೇಳಬಹುದು, ಈ ನಿರ್ಣಯವನ್ನು ತೆಗೆದುಕೊಂಡಿದ್ದಾರೆ ಎನ್ನುವುದು ನನ್ನ ಭಾವನೆ. ಆದುದರಿಂದ ಈ ಸಂಬಂಧದಲ್ಲಿ ಏನು ಅನ್ಯಾಯ ನಡೆದಿದೆ, ಪೋಲೀಸರ ಎಕ್ಸೆಸ್ ಏನಿವೆ, ಪೋಲೀಸ್ ಅಧಿಕಾರಿಗಳು ಮಾಡಿರತಕ್ಕ ಅತ್ಯಾಚಾರ, ಇವುಗಳ ಬಗ್ಗೆ ಪೂರ್ಣವಾದ ವಿವರಣೆಯನ್ನು ಈ ಸಭೆಗೆ ಒದಗಿಸಬೇಕು. ಇದರಲ್ಲಿ ಏನೇನು ನಡೆದಿದೆ, ಯಾರು ಯಾರು ಇದಕ್ಕೆ ಕಾರಣ

ಎನ್ನುವುದಕ್ಕೆ ಕೂಡ ಈ ಸಭೆಗೆ ಪೂರ್ಣವಾದ ವಿವರಣೆ ಕೊಡುವುದು ಸೂಕ್ತ. ಒಂದು ವೇಳೆ ಈ ಜಾಗ ಅರಣ್ಯ ಜಮೀನು ಎನ್ನುವುದು ಸರ್ಕಾರಕ್ಕೆ 10 - 11 ವರ್ಷವಾದ ಮೇಲೆ ಗೊತ್ತಾಗಿದ್ದರೂ ಕೂಡ, ಅರಣ್ಯ ಜಮೀನು ಎನ್ನುವುದನ್ನು ನಮರ್ಥನೆ ಮಾಡುವುದಕ್ಕೆ ಅಧಿಕಾರಿಗಳು ಪ್ರಯತ್ನ ಮಾಡಿದ್ದರೂ ಕೂಡ ಇಂಥ ಒಂದು ನಿರ್ಣಯವನ್ನು ಸರ್ಕಾರದವರು ತೆಗೆದುಕೊಳ್ಳಬಾರದಾಗಿತ್ತು. ಅವರು ಯಾರೂ ಮೇಲ್ಮಟ್ಟದ ವರ್ಗದ ಜನರಲ್ಲ. ಅವರೆಲ್ಲ ಒಡ್ಡರು, ದಾನರುಗಳು ಮತ್ತು ಹರಿಜನರು. ಆದ್ದರಿಂದ ಸರ್ಕಾರ ಈ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಕೈ ಹಾಕ ಬಾರದಾಗಿತ್ತು. ಮಾನ್ಯ ಮುಖ್ಯ ಮಂತ್ರಿಗಳು ಯಾವ ರಾಜಕೀಯ ಒತ್ತಡಕ್ಕೂ ಮಣಿಯುವುದಿಲ್ಲ. ನ್ಯಾಯವನ್ನು ಒದಗಿಸುವ ಕಾಲದಲ್ಲಿ ಪಕ್ಷಾತೀತ ದೃಷ್ಟಿಯಿಂದ ನ್ಯಾಯವನ್ನು ನಿರ್ಣಯ ಮಾಡುತ್ತೇನೆ ಎಂದು ಹಲವಾರು ಸಾರಿ ಘೋಷಣೆ ಮಾಡಿದ್ದಾರೆ. ಆದರೆ ಇವರ ಸರ್ಕಾರದಲ್ಲೇ ಇವೆಲ್ಲ ಆಗಿವೆ.

1961-62 ರಲ್ಲಿ ಜಮೀನು ಕೊಟ್ಟಾಗ ಹಿಂದಿನ ಸರ್ಕಾರ ಫಾರೆಸ್ಟ್ ಲ್ಯಾಂಡ್ ಕೊಟ್ಟಿತ್ತು ಎಂದು ಸಮರ್ಥನೆ ಮಾಡುವುದಾದರೂ, 12 ವರ್ಷಗಳ ಮೇಲೆ ಇಂಥ ನಿರ್ಣಯವನ್ನು ತೆಗೆದು ಕೊಳ್ಳಬಾರದಾಗಿತ್ತು. ಸರ್ಕಾರ ಕೊಟ್ಟಿರತಕ್ಕ ಸರ್ಟಿಫೈಡ್ ಕಾಪಿಗಳಲ್ಲಿ ಇವೆಲ್ಲ ಸರ್ಕಾರಿ ಬಂಜರು ಜಮೀನು ಎಂದು ಇದೆ. ಒಂದು ವೇಳೆ ಸರ್ವೇಯರನ್ನು ಕಳುಹಿಸಿ, ಅವೆಲ್ಲ ಅರಣ್ಯ ಭೂಮಿ ಎನ್ನುವ ನಿರ್ಣಯವನ್ನು ಕೊಟ್ಟರೂ ಕೂಡ, ಮಾನವೀಯತೆಯ ದೃಷ್ಟಿ ಇರಬಹುದಾಗಿತ್ತು. ಇದರ ಬಗ್ಗೆ ಸರ್ಕಾರದವರು ಪುನರ್ಪರಿಶೀಲನೆ ಮಾಡಬೇಕು, ಇಂಥ ನಿರ್ಣಯವನ್ನು ತೆಗೆತು ಕೊಳ್ಳುವುದು ಸಾಧುವಲ್ಲ. ಈ ಹೊತ್ತು ಸರ್ಕಾರ ಏನು ಆದೇಶವನ್ನು ಕೊಟ್ಟರೆ ಅದು ನಿಜಕ್ಕೂ ಬಡವರ ಮೇಲೆ ಗದಾ ಪ್ರಹಾರ ಮಾಡತಕ್ಕ ಆದೇಶ. ಆದ್ದರಿಂದ ಸರ್ಕಾರದ ಆದೇಶವನ್ನು ವಾಪಸು ಪಡೆಯುವುದರ ಜೊತೆಗೆ ಪೋಲೀಸಿನವರು ಏನು ಅನ್ಯಾಯ, ಅತ್ಯಾಚಾರ ಮಾಡಿದ್ದಾರೆ, ಅವರು ಯಾವುದೇ ರಾಜಕೀಯ ಪ್ರಭಾವಕ್ಕೆ ಒಳಗಾಗಿರಲಿ, ಒಳಗಾಗದೆ ಇರಲಿ, ಅವರು ಮಾಡಿರತಕ್ಕ ಕೆಲಸಕ್ಕೆ ಹೊಣೆಗಾರಿಕೆಯನ್ನು ಹೊರಲೇ ಬೇಕಾಗುತ್ತದೆ; ಪಾಪದ ಕೆಲಸವನ್ನು, ತಪ್ಪಿನ ಕೆಲಸವನ್ನು ಮಾಡಿರುವವರು ಅದಕ್ಕೆ ಜವಾಬ್ದಾರರಾಗುತ್ತಾರೆ. ಅಂಥ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂಜರಿಯಬಾರದು ಎಂದು ಹೇಳುತ್ತೇನೆ. ದಯ ಮಾಡಿ ಇದರ ಬಗ್ಗೆ ನಿಷ್ಪಕ್ಷಪಾತವಾದ ನಿರ್ಣಯ ತೆಗೆದುಕೊಳ್ಳುವುದು ಸೂಕ್ತ ಎನ್ನುವ ಮಾತನ್ನು ಹೇಳಿ, ಈ ಹೊತ್ತು ಮಂತ್ರಿಗಳು ಅರಣ್ಯದ ಪರ್ಸಂಟೇಜ್ ಏನಿದೆ ಅದನ್ನು ಉಳಿಸಬೇಕು ಎನ್ನುವ ಆಸೆ ಆಕಾಂಕ್ಷೆಯನ್ನು ಇಟ್ಟುಕೊಂಡಿರುವ ದೃಷ್ಟಿಯಲ್ಲಿ 1961-62 ರಲ್ಲಿ ಮಂಜೂರು ಆಗಿರತಕ್ಕ ಜಮೀನನ್ನು ಈ ಹೊತ್ತು ಅವರಿಂದ ಕಸಿದುಕೊಳ್ಳುವುದಕ್ಕೆ ಹೋಗತಕ್ಕುದು ಸಾಧುವಾದ ಮಾರ್ಗ ವಲ್ಲ ಎಂದು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿರುವ ಕಾಗದ-ನನಗೆ ಕಳುಹಿಸಿದ್ದರೂ ಅದು ನೇರವಾಗಿ ನನ್ನ ಗಮನಕ್ಕೆ ಬಂದಿಲ್ಲ. ಪೋಲೀಸ್ ಎಕ್ಸೆನಸ್ ಬಗ್ಗೆ ಎನ್‌ಕ್ವೈರಿ ಮಾಡಬೇಕೆಂದು ಹೇಳಿರುವುದು ಜ್ಞಾಪಕವಿದೆ. ಆದರೆ ಎಲಿಕ್ಷನ್ ಆಗಬೇಕು ಎನ್ನುವ ವಿಚಾರದ ಬಗ್ಗೆ ನನಗೆ ಏನೂ ಗೊತ್ತಿಲ್ಲ.

†ಶ್ರೀ ಎನ್. ಜಿ. ಹಾಲಪ್ಪ (ಚನ್ನಗಿರಿ).—ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಈ ಬಗ್ಗೆ ಒಂದು ಚರ್ಚೆ ಪ್ರಾರಂಭ ಮಾಡಿದ್ದಾರೆ. ಇದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದುದರಿಂದ ನನಗೆ ತಿಳಿದಿರತಕ್ಕಂಥ ವಿಷಯವನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಹಗೇದಹಳ್ಳಿ ಸಂಯುಕ್ತ ಸಹಕಾರಿ ಬೇಸಾಯ ಸಂಘದ ಬಗ್ಗೆ ಒಂದು ದೊಡ್ಡ ಹಗರಣವಾಗಿದೆ. ಹಗೇದಹಳ್ಳಿ, ಬಸವೇಶ್ವರ, ನಾಯಿಬಾಬು, ಮುಂದ್ಯಾಳ ಈರೀತಿ 5—6 ಗ್ರೂಪ್‌ಗಳು ಅಲ್ಲಿ ಇವೆ. ಈ ಸೊಸೈಟಿಯ ಅಧ್ಯಕ್ಷರಾಗಿದ್ದ ಪಂಚಾಕ್ಷರಪ್ಪ ಅನ್ನುವ ವ್ಯಕ್ತಿ ಇತರ 5 - 6 ಸೊಸೈಟಿಗಳಲ್ಲೂ ಇದ್ದು ಸುಮಾರು 6—7 ಲಕ್ಷ ರೂಪಾಯಿಗಳನ್ನು ದುರುಪಯೋಗ ಮಾಡಿದ್ದಾನೆ. ಈ ಸೊಸೈಟಿಗೆ ವಂಚನೆ, ಮೋಸ ಹಣ ದುರುಪಯೋಗ ಮುಂತಾದ ಅಪಾದನೆಗಳು ಅವನ ಮೇಲೆ ಇದೆ ಎಂದು ಹಿಂದಿನ ಸರ್ಕಾರಕ್ಕೆ ಸುಮಾರು ರೆಪ್ರೆಸೆಂಟೇಷನ್ ಕೊಟ್ಟಮೇಲೆ ಈ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಿದರು. ಈ ಸರ್ಕಾರ ಸೂಪರ್‌ಸೀಡ್ ಮಾಡಲಿಲ್ಲ. ಈ ಡೈರಿ ಫಾರಂ ಒಂದಕ್ಕೇನೆ 80 ಸಾವಿರ ರೂಪಾಯಿ ನಾಲ ಕೊಡರಾಗಿದೆ. ನಾನು ಆ ಸ್ಥಳವನ್ನು ನೋಡಿದ್ದೇನೆ. ಈ ಬಗ್ಗೆ ಸರ್ಕಾರಕ್ಕೆ ಅವನು ಎಷ್ಟು ಮೋಸ ಮಾಡಿದ್ದಾನೆ ಎಂದರೆ all possible offences in the penal code have been done. ಆ ಇನ್‌ವೆಸ್ಟಿಗೇಷನ್ ಸಿ.ಐ.ಬಿ. ಅವರು ಮಾಡಿಕೊಂಡು ಹೋಗಿದ್ದಾರೆ. ಆ ಗ್ರಾಮದಲ್ಲಿ ಬೋವಿ ಮತ್ತು ದಾಸರ ಜನಾಂಗ ಮತ್ತು ಬೇರೆಯವರು 8 ಮಕ್ಕಲುಗಳು ಮಾತ್ರ ವಾಸ ಮಾಡುತ್ತಿದ್ದಾರೆ. ಅವರು

(ಶ್ರೀ ಎನ್. ಜಿ. ಹಾಲಪ್ಪ)

ಅಕ್ಕ್ಯೂಯರ್ ಕಲ್ಟಿವೇಟರ್ಸ್. ಆ ಸೊಸೈಟಿಯ ಅಧ್ಯಕ್ಷರು ಬೇರೆ ಕುಟುಂಬಗಳಿಗೆ ಎ.ಬಿ.ಸಿ.ಡಿ. ಯವರಿಗೆ 3—3 ಎಕರೆ ಜಮೀನನ್ನು ಸಾಗುವಳಿಗೆ ಮಾಡುವಂತೆ ಸಾಗುವಳಿ ಚೀಟಿ ಬರೆದುಕೊಟ್ಟಿದ್ದಾರೆ. ಆ ಸೊಸೈಟಿಯ ಸೀಲ್ ಮತ್ತು ರುಜು ಹಾಕಿಕೊಟ್ಟಿದ್ದಾರೆ. ಆ ಕುಟುಂಬಗಳು ಯಾರೂ ಆ ಗ್ರಾಮದಲ್ಲಿಲ್ಲ. ಆದರೂ ಕೂಡ ಅದರ ಫಲವನ್ನು ಅವರು ಅನುಭವಿಸುತ್ತಿದ್ದಾರೆ. I do not know whether they are the real grantees and none of them are actually there. ಈ ರೀತಿ ಅನ್ಯಾಯಗಳನ್ನು ಮಾಡಿದ್ದಾರೆ. ಈ ಅನ್ಯಾಯಗಳನ್ನು ಲೆಕ್ಕ ಹಾಕಲು ಸಾಧ್ಯವೇ ಇಲ್ಲ.

Sri KAGODU THIMMAPPA.—On whose behalf you were representing?

Sri N. G. HALAPPA.—On behalf of Dasas I have been representing the case. ನಿಜವಾಗಿ ಉಳುವವನಿಗೇ ಜಮೀನು ಕೊಡಿ. ನ್ಯಾಯವಾಗಿ ಜಮೀನು ಉಳುವವರು ಯಾರು ಎಂದು ನೋಡಿ ಕೊಡಿ. ಪಹಣಿಯಲ್ಲಿ ಅಕ್ಕ್ಯೂಯರ್ ಕಲ್ಟಿವೇಟರ್ಸ್ ಹೆಸರು ಇಲ್ಲ. ಬೇರೆಯವರ ಹೆಸರು ಇದೆ. ಅವರು ಯಾರೂ ಆ ಗ್ರಾಮದಲ್ಲಿಲ್ಲ. ಆ ಗ್ರಾಮದಲ್ಲಿರುವವರು ದಾನರ ಜನಾಂಗದವರು ಮತ್ತು ಬೋವಿ ಜನಾಂಗದವರು ಮತ್ತು ಇತ್ತರ 8 ವಕ್ಕಲುಗಳು ಮಾತ್ರ ಇದ್ದಾರೆ. ಈ ಬಗ್ಗೆ ವಿರೋಧ ಪಕ್ಷದ ನಾಯಕರು ತಪ್ಪು ಅಭಿಪ್ರಾಯ ಪಟ್ಟಿದ್ದರೆ ನಾನೇ ಅವನ್ನು ಆ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿರುವ ನತ್ಯಾನತ್ಯತೆಯನ್ನು ವೇದ್ಯ ಮಾಡಿ ತಿಳಿಸಲು ಸಿದ್ಧನಿದ್ದೇನೆ. ಆ ಗ್ರಾಮದಲ್ಲಿ ನ್ಯಾಯವಾಗಿದ್ದುಕೊಂಡು ಯಾರು ವ್ಯವಸಾಯ ಮಾಡುತ್ತಾರೋ ಅವರು ಮಾಡಿದ್ದೆ ಜಮೀನಿನ ಫಲವನ್ನು ನಮಗೆ ಬಂದ ಕಾಲದಲ್ಲಿ ರಾತೋರಾತ್ರಿ ಬಂದು ಪೋಲೀಸ್ ರಕ್ಷಣೆಯನ್ನು ಪಡೆದು, ಆ ಬೆಳೆಯನ್ನು ಕುಯಿಸಿಕೊಂಡು ಹೋಗುತ್ತಾರೆ. ಈ ರೀತಿಯಾಗಿ ಅವರು ಮಾಡಿ ಫಸಲೂ ಕೂಡ ಹಾಳಾಗಿ ಹೋಗುತ್ತಾ ಇದೆ. ಈ ರೀತಿ ಆ ಬಡಜನಗಳಿಗೆ ವಂಚನೆ, ಮೋಸ ಮಾಡುತ್ತಿದ್ದಾರೆ. ಈ ಬಗ್ಗೆ ಹೈಕೋರ್ಟ್‌ಗೆ ದೂರು ಕೊಟ್ಟಾಗ The High Court has upheld the Supersession Order. ಆ ಪ್ರಕಾರ ಸೊಸೈಟಿ ಆಡಳಿತ ರದ್ದಾಗಿ ಆಡಳಿತಾಧಿಕಾರಿ ನೇಮಕವಾಯಿತು. The suit is not maintainable. ಆ ಸೂಟ್ ಡಿಸ್ಮಿಸ್ ಆಯಿತು. ಈ ಬಡ ಜನಗಳಿಗೆ ವಂಚನೆ, ಮೋಸ ಅನ್ಯಾಯಗಳನ್ನು ಎಷ್ಟು ಮಾಡಿದ್ದಾನೆ ಎಂದು ಪರೀಕ್ಷಿಸಲು ಆ ಸ್ಥಳಕ್ಕೆ ವಿರೋಧಪಕ್ಷದ ನಾಯಕರು ನನ್ನ ಜೊತೆಗೆ ಬಂದರೆ ಅವರನ್ನು ಕರೆದುಕೊಂಡು ಹೋಗಿ ತೋರಿಸುತ್ತೇನೆ.

ಇನ್ನೊಂದು ವಿಷಯವನ್ನು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ಪೋಲೀಸರೇ ವಕ್ಕಲೆಬ್ಬಿಸುವ ನೋಟೀಸ್ ನೀಡಿ ಅಲ್ಲಿನ ಬಡಕುಟುಂಬಗಳ ಮೇಲೆ ಅತ್ಯಾಚಾರ ಮಾಡಿದ್ದಾರೆ ಎಂದು ಹೇಳಿದರು. I do not know whether they are the real grantees. ಅವರು 5 ಜನ ದಾವಾ ಹಾಕಿದ್ದಕ್ಕೆ The High Court upheld the Supersession Order. ಆ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಿದರು. ಅವರ ಪರ ನಾನು ವಕಾಲತ್ ವಹಿಸಿದ್ದೆ. ಒಂದು ಪೈಸೆ ಕೂಡ ಅವರಿಂದ ನಾನು ತೆಗೆದುಕೊಂಡಿಲ್ಲ. ಆ ಅಡ್ಮಿನಿಸ್ಟ್ರೇಟರ್ ಇವನ್ನು ಹೇಳಿದ ಹಾಗೆ ಕೇಳುತ್ತಾನೆ. ಅವನು ರಿಯಲ್ ಅಡ್ಮಿನಿಸ್ಟ್ರೇಟರ್ ಅಲ್ಲ. ಇವರ ತಂಟೆಗೆ ಹೋಗದ್ದೇ ಇದ್ದರೂ ಕೂಡ ಅವನು ಕೆಲವು ಪುಂಡರನ್ನು ಕರೆದುಕೊಂಡು ಬಂದು, ಪೋಲೀಸಿನವರ ಸಹಾಯವನ್ನೂ ತೆಗೆದುಕೊಂಡು ರಾತ್ರೋರಾತ್ರಿ ಬಂದು ಇವರು ಮಾಡಿದ ಫಸಲನ್ನು ಕಿಯಿಸಿಕೊಂಡು ಹೋಗಿದ್ದಾನೆ. ಈ ಬಡಜನಗಳಿಗೆ The Police, there, were not able to protect them. ಅಲ್ಲ ಸರ್ಕಲ್ ಇನ್‌ಸ್ಪೆಕ್ಟರ್ ಇದರ ಇನ್‌ವೆಸ್ಟಿಗೇಷನ್‌ಗೆ ಕಳುಹಿಸಿದ ಮೇಲೆ ಕೆಲವರು ಓಡಿಹೋಗಿದ್ದಾರೆ. ಇಬ್ಬರು ಪೋಲೀಸರೂ ಕೂಡ ಸಸ್ಪೆಂಡ್ ಆಗಿದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಸಸ್ಪೆಂಡ್ ಆದ ಪೋಲೀಸರು ಯಾರು ಎಂದು ನನಗೆ ಗೊತ್ತಿಲ್ಲ. ಇದರಲ್ಲಿ ಎಷ್ಟು ವಂಚನೆ, ಮೋಸ, ಅಧರ್ಮ, ಅನ್ಯಾಯ ನಡೆದಿದೆ ಎಂದು ತಮಗೆ ಗೊತ್ತಾಗಬೇಕಾದರೆ ಇದರ ಬಗ್ಗೆ ತನಿಖೆ ನಡೆಸಬೇಕು. ಪ್ರತಿ ವರ್ಷವೂ ಆಡಿಟ್ ರಿಪೋರ್ಟ್‌ನಲ್ಲಿ ಇದರ ಬಗ್ಗೆ ಅಬ್ಸರ್ವೇಷನ್ ಮಾಡಿದ್ದಾರೆ. ಇದರಲ್ಲಿ ರಿಜಿಸ್ಟ್ರಾರ್ ಅವರಿಗೆ ಬೇಕಾದ ಮನುಷ್ಯ ಆದುದರಿಂದಲೇನೆ ಇದರಲ್ಲಿ ಸುಮಾರು 6—7 ಲಕ್ಷ ರೂಪಾಯಿ ತಿಂದಿದ್ದಾನೆ. ಈ ಸಂಘ ಸೂಪರ್‌ಸೀಡ್ ಆದಮೇಲೂ ಸಹ ಶಿವಮೊಗ್ಗ ಡಿ. ಸಿ. ಸಿ. ಬ್ಯಾಂಕ್‌ನವರು 16 ಸಾವಿರ ರೂಪಾಯಿ ಸಾಲ ಕೊಟ್ಟಿದ್ದಾರೆ. ಸೂಪರ್‌ಸೀಡ್ ಆದ ಸೊಸೈಟಿಗೆ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಿದ್ದಾರೆ. ಆ ಮನುಷ್ಯನ ವರ್ತನೆ ತಡೆಯಲು ಅಸಾಧ್ಯವಾಗಿದೆ.

The person who is posted is not an Administrator because his behaviour is different. This has been superceded for election purposes. A loan of 16 thousand rupees has been drawn by the Secretary of this Superceded Society. How are you going to recover the money?

Sri H. S. SIDDAPPA.—Why not the D. C. C. Bank be superceded?

Sri N. G. HALAPPA.—It deserves to be superceded.

Sri S. BANGARAPPA.—He does not know that the Bank is headed by a Congress 'O' Member.

Sri H. S. SIDDAPPA.—whether he is a Congress 'O' member or not it is a different point. Fraud is a fraud.

Sri N. G. HALAPPA.—They have been advanced with loan ಇದಲ್ಲದೆ ಇನ್ನೊಂದು ವಿಷಯ ಏನೆಂದರೆ ರ್ಯಾಂಡ್ ಮಾರ್ಗೇಜ್ ಬ್ಯಾಂಕ್‌ನಿಂದ 20–30 ಸಾವಿರ ರೂಪಾಯಿ ಸಾಲ ತೆಗೆದುಕೊಳ್ಳಲು ಅಪ್ಲಿಕೇಷನ್ ಹಾಕಿದ್ದೆ. ಅದನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಕ್ಕೆ ರಿಜಿಸ್ಟ್ರಾರ್ ಮೇಲಿಂದ ಮೇಲೆ ಇವರಿಗೆ ಕಾಗದ ಬರೆದಿದ್ದಾರೆ. ಬಹುಶಃ ಈ ಬಗ್ಗೆ ಸರ್ಕಾರ ತನಿಖೆ ನಡೆಸಿದರೆ ಇದರಲ್ಲರುವ ಅವ್ಯವಹಾರ ಏನು ಇದೆ ಎಂದು ಗೊತ್ತಾಗುತ್ತದೆ. He is a tremendous man. He excels even Mundhra. Let the Hon. Leader of the Opposition verify and satisfy himself whether there is any truth in the statement that I am making on the floor of this House. I will take him if he wants. I know it is a forest land. Subsequently it has been taken over by the Department.

Sri H. S. SIDDAPPA.—I will just ask him. If that party joins your party, can you leave it off?

Sri N. G. HALAPPA.—That is not my stand. That was the stand of the previous Government. An effence committed by A, or B or C is an offence irrespective of persons. Actual cultivators ಎಂದು ಸರ್ಕಾರಕ್ಕೆ ಮನವಿಮಾಡಿಕೊಳ್ಳುತ್ತೇನೆ. ಶ್ರೀವಾನ್ ದೇವೇಗೌಡರಿಗೆ ಜನ ಏನು ಸಾಗುಮಾಡುತ್ತಾರೆ ಅವರಿಗೆ ಕೊಡಿಸಲಿ. ಯಾರು ಜನ ಸಾಗುಮಾಡುತ್ತಾರೆ, ದಾನರು ಮಾಡಲಿ, ಒಡ್ಡರು ಮಾಡಲಿ. No doubt it is an illegal grant. ಗ್ರಾಂಟ್ ಕ್ಯಾನ್ಸಲ್‌ಮಾಡಿ ಅಕ್ಯುಯಲ್ ಕಲ್ಟಿವೇಟರ್ಸ್ ಏನು ಇದ್ದಾರೆ ಆ ಬಗ್ಗೆ ಬೆಂಬಲ ಕೊಡುತ್ತೇವೆ. ಒಡ್ಡರಾಗಲಿ, ದಾನರಾಗಲಿ, 34 ಜನರಿಗೆ ಗ್ರಾಂಟ್ ಆಗಿದೆ. None of these grantees are in these villages. We do not know where they are. That is the real state of affairs. Those are the innocent people who by the sweat of the brow initailly removed the jungle and brought the land under plough. We do not know where these people are.

ಶ್ರೀ ಡಿ. ದೇವರಾಜ ಅರಸ್.—ಇವರಿಗೆ ಗ್ರಾಂಟ್ ಆಗಿಲ್ಲವೆ? ತಾವು ಹೇಳುವುದರಲ್ಲಿ ನನಗೆ ಏನು ಗೊತ್ತಾಗುತ್ತದೆ ಎಂದರೆ, ಅಕ್ಯುಯಲ್‌ಆಗಿ ಯಾರು ಮಾಡಿಕೊಂಡು ಇರತಕ್ಕವರು ನಮ್ಮ ಹೇಳಿಕೆ ಪ್ರಕಾರ 25 ಮತ್ತು 8 ಸಂಸ್ಥಾನಗಳವರು ಇದ್ದಾರೆ. ಸಾಗುವಳಿಗೆ ಕೊಟ್ಟಿರತಕ್ಕ ಹೆಸರಿನ ಜನ ಬೇರೆ ಇದ್ದಾರೆ, ಅವರು ಅಲ್ಲ ಇಲ್ಲ. ಅವರು ಅಲ್ಲ ಇಲ್ಲದೆಹೋದರೂ ಸೊಸೈಟಿ ಅವರ ಹೆಸರಿನಲ್ಲಿ ನಡೆಸುತ್ತಾ ಇರುವವರು ಇದ್ದಾರೆ. ಅವರ ಬಗ್ಗೆ ಇವರು ಹಣ ತೆಗೆದುಕೊಳ್ಳುತ್ತಾರೆ: ಇವರು ಕಲ್ಟಿವೇಟ್ ಮಾಡಿದಹಾಗೆ ತೋರಿಸಿ ಅದರ ಫಲ ಇವರು ತೆಗೆದುಕೊಳ್ಳುತ್ತಾರೆ ಎಂದು ತಾವು ಹೇಳುವುದೇ?

ಶ್ರೀ. ಎನ್. ಜಿ. ಹಾಲಪ್ಪ.—ಈಗ ಮೂರು ತಿಂಗಳ ಹಿಂದೆ 20 ಜನ, ಜೇರೆಯವರನ್ನು ಕರೆಸಿ ಕೊಂಡು ಗುಡಿಸಲು ಕಟ್ಟಿಸಿಕೊಟ್ಟು ದಾನರು ಮತ್ತು ಒಡ್ಡರನ್ನು ಹೊಸೆಯಲಕ್ಕೆ ಶುರು ಮಾಡಿದರು.

ಶ್ರೀ ಕೆ. ಪ್ರಭಾಕರ್.—ರ್ಯಾಂಡ್ ಸೊಸೈಟಿ ಹೆಸರಿನಲ್ಲಿ ಇದೆಯೋ ಇಂಡಿವಿಜುಯಲ್ ಹೆಸರಿನಲ್ಲಿ ಇದೆಯೋ?

ಶ್ರೀ. ಎನ್. ಜಿ. ಹಾಲಪ್ಪ.—ರ್ಯಾಂಡ್ ಪೂಲ್ ಮಾಡಿದಹಾಗೆ ಮಾಡಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ರ್ಯಾಂಡ್ ಪೂಲ್ ಮಾಡಿಕೊಂಡು ಸೊಸೈಟಿ ರಿಜಿಸ್ಟರ್ ಮಾಡಿದ್ದಾರೆಯೇ ?

ಶ್ರೀ ಎನ್. ಜಿ. ಹಾಲಪ್ಪ.—25 ಸಂಸಾರ ದಾಸರು ಮತ್ತು ವಡ್ಡರು ಏನು ಇದ್ದಾರೆ ಅವರನ್ನು ಹೊಡೆಸಲಿಕ್ಕೆ 3 ತಿಂಗಳ ಹಿಂದೆ 15-20 ಬೇರೆ ಮನೆಯವರನ್ನು ತಂದು ಇಟ್ಟುಕೊಂಡಿದ್ದಾರೆ. ಅನೇಕ ಜನರಿಗೆ ಕೈ ಫ್ರಾಕ್ಚರ್ ಆಗಿದೆ. ತಾವು ಬಂದು ನೋಡಿ ಗೊತ್ತಾಗುತ್ತದೆ, ಎಷ್ಟೋ ಕೇಸುಗಳು ರಿಜಿಸ್ಟರ್ ಆಗಿವೆ. ಈ ರೀತಿ ಪಂಚಾಕ್ಷರಯ್ಯನವರು ಅನ್ಯಾಯ ಮಾಡುತ್ತಿದ್ದಾರೆ. ನೀವು ಹೇಳಿದ ಹಾಗೆ ನತ್ಯಾಂಶ ಏನು ಇಲ್ಲ ಎಂದು ವಿನಯದಿಂದ ತಮ್ಮಲ್ಲಿ ಹೇಳಲಿಕ್ಕೆ ಇಷ್ಟ ಪಡುತ್ತೇನೆ. ಇದರಲ್ಲಿ ಯಾವ ರಾಜಕೀಯ ಒತ್ತಡವೂ ಇಲ್ಲ. ರಿಕಾರ್ಡ್ ಬಿರ್ಡ್ ಆಫ್ ಮಾಡಿದ ಆಧಾರದಮೇಲೆ ಸೂಪರ್‌ಸೆಷನ್ ಆಗಿದೆ. ಅವರಮೇಲೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ಅವರಮೇಲೆ ಕಣ್ಣು ಬಿಟ್ಟಿಲ್ಲ. Even now, I am defending them in the Munsiff's Court, Bhadravathi. I am defending these Woddars and Dasars without taking any fees, not even a single pie. ಫಸಲು ಬಂತು ಎಂದರೆ ಎಲ್ಲಾ ನೋಡಿಕೊಂಡು ಹೋಗಿ ರಾತ್ರಿ ಹೊತ್ತು ಕೊಯ್ಯಲಿಕ್ಕೆ ಹೋಗುತ್ತಾರೆ. ನಿಜವಾಗಿ ಬೆಳೆದ ರೈತ ಕತ್ತಲು ರಾತ್ರಿಯಲ್ಲಿ ಕೊಯ್ಯಲನ್ನು ಮಾಡುತ್ತಾನೆಯೇ ? ಇಂತಹ ಪ್ರಕರಣಗಳನ್ನು ನಡೆಸಿ ಸರ್ಕಾರಕ್ಕೆ 6-7 ಲಕ್ಷರೂಪಾಯಿಗಳನ್ನು ಮೋಸ ಮಾಡಿದ ಮನುಷ್ಯನಿದ್ದಾನೆ. ಬೇಕಾದರೆ ದೇವೇಗೌಡರೇ ತನಿಖೆ ಮಾಡಲಿ, ಅವರಿಗೆ ಬಿಡೋಣ. ಎಷ್ಟು ದುರಪಯೋಗವಾಗಿದೆ, ಜನರಲ್ ಬಾಡಿ ಮೀಟಿಂಗ್ ಇಂಟರ್‌ಸ್ಟೇ ಆಗಿದೆ. ಜನರಲ್ ಬಾಡಿ ಮೀಟಿಂಗನ್ನು ಶಿವಮೊಗ್ಗಾದಲ್ಲಿ ಮಾಡಿದ್ದು. ಈ ರೀತಿಯು ವ್ಯವಹಾರ ನಡೆದಿದೆ. ಯಾವ ಬಡವನಿಗೆ ಡಿಪ್ರೆಸ್ಡ್ ಕ್ಲಾಸ್ ಮೈನರ್ ಕೋಮಿಗೆ ಅನ್ಯಾಯವಾಗಿಲ್ಲ ನಾವು ಆ ರೀತಿ ಹೆಚ್ಚಿನ ರಕ್ಷಣೆ ಕೊಟ್ಟಿದ್ದೇವೆ. ನಾನು ಬಿಟ್ಟಿ ವಕಾಲತ್ತು ಮಾಡದೆ ಇದ್ದರೆ ದಾಸರು ಮತ್ತು ಒಡ್ಡರು ಬಲಸೆ ಹೋಗಬೇಕಾದ ನಂದರ್ಭಬಂದಿತ್ತು. ಇಷ್ಟೆಲ್ಲಾ ಮಾಡಿದ್ದಾರೆ. ಬಹಳ ಅನ್ಯಾಯ ಮಾಡಿದ್ದಾರೆ. ನಾನು ಕಂಟ್ರವರ್ಸಿಗೆ ಎಂಟರ್ ಆಗಬಾರದು ಎಂದು ಇದ್ದೆ. ಆದರೆ ನೀವು ಪ್ರಶ್ನೆ ರೈಸ್ ಮಾಡಿದ್ದು ಒಳ್ಳೆಯದೇ ಆಯಿತು. ಸರ್ಕಾರ ಕೂಲಂಕುಷವಾಗಿ ತನಿಖೆ ಮಾಡಲಿ. ಯಾರು ಕಳ್ಳ, ಯಾರು ಸಾಚ, ಹಣ ಎಷ್ಟು ದುರುಪಯೋಗವಾಗಿದೆ ವಿಚಾರಮಾಡಿ ತಪ್ಪಿತಸ್ಥನಿಗೆ ಶಿಕ್ಷೆ ಕೊಡಲಿ. ಶ್ರೀಮಾನ್ ದೇವೇಗೌಡರು ಈ ಅವಕಾಶ ಕಲ್ಪಿಸಿ ಕೊಟ್ಟರು. ಅವರು ಹೇಳದೆ ಇದ್ದರೆ ಅಸೆಂಬ್ಲಿಯಲ್ಲಿ ನಾನು ಹೇಳುತ್ತಾ ಇರಲಿಲ್ಲ. ಅವರಿಗೆ ಧನ್ಯವಾದಗಳನ್ನು ಅರ್ಪಿಸಿ ನಮ್ಮ ಅಧ್ಯಕ್ಷರನ್ನು ವಂದಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಹೇಳಬೇಕಾಗುತ್ತದೆ He is dragging my name and my party and that is why I want to further clarify the position. ಶ್ರೀಮಾನ್ ಹಾಲಪ್ಪನವರು ಈ ವಿಷಯಕ್ಕೆ ಇಂಟರ್‌ವೀನ್ ಆಗಿದ್ದಾರೆ. ಕೋರ್ಟಿನಲ್ಲಿ ಒಂದು ಪಕ್ಷ ಹಿಡಿದು ವಾದಿಸುತ್ತಿದ್ದಾರೆ. ಈ ಸಭೆಯಲ್ಲಿ ಈ ಒಂದು ಪ್ರಯತ್ನ ಮಾಡಿದ್ದಾರೆ, ಬಹಳ ಸಂತೋಷ. ನಿಮಗೆ ಜನತೆ ಪರವಾಗಿ ನಾನು ಅಭಿನಂದನೆ ಸಲ್ಲಿಸುತ್ತೇನೆ. ಈ ದೇಶದಲ್ಲಿ ರಾಜಕಾರಣ ಮಾಡತಕ್ಕವರು ಸಾಮಾನ್ಯವಾಗಿ ನಮ್ಮ ಮಹತ್ಮಾ ಗಾಂಧಿಯವರು ಒಂದು ನತ್‌ಸಂಪ್ರದಾಯವನ್ನು ಹಾಕಿಕೊಟ್ಟರು. ರಾಜಕಾರಣ ಮಾಡುವವರು ವಕೀಲ ವೃತ್ತಿ ಮಾಡಬಾರದು. ರಾಜಕಾರಣ ಮಾಡುವವರು ವಕೀಲ ವೃತ್ತಿ ಮಾಡುವುದು ನತ್‌ಸಂಪ್ರದಾಯವಲ್ಲ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಅದು ಎಲ್ಲ ಇದೆ ಹೇಳಬೇಕು.

ಶ್ರೀ ಎನ್. ಬಂಗಾರಪ್ಪ.—ಪುನ್ಸ್‌ಕದ್ದು ಎಂದು ಹೇಳಲಿಲ್ಲ. ನತ್‌ಸಂಪ್ರದಾಯ ಹೇಳಿದರು.

ಶ್ರೀ ಎಚ್. ಡಿ. ದೇವೇಗೌಡ.—ಅದರಲ್ಲೂ ರೆವಿನ್ಯೂ ಅಧಿಕಾರಿಗಳ ಮುಂದೆ ವಕೀಲ ವೃತ್ತಿ ಮಾಡುವುದನ್ನು ಬಿಡಬೇಕು ಎನ್ನತಕ್ಕಂಥಾದ್ದು ಅದು ಒಳ್ಳೆ ಸಂಪ್ರದಾಯ. ಮಾಡುವುದು ಬಿಡುವುದು ಅವರವರಿಗೆ ಸೇರಿದ್ದು.

Sri H. SIDDAVEERAPPA.—The very constitution of India was written by an eminent lawyer.

ಶ್ರೀ ಎಚ್. ಡಿ. ದೇವೇಗೌಡ.—ಹಾರಿಕೆ ಉತ್ತರ ನಮಗೆ ಹೇಳುವುದು ಬೇಡ. ನಾನು ಮೊದಲು ಚರ್ಚೆಗೆ ಪ್ರಾರಂಭ ಮಾಡಿದಾಗ ಪಾರ್ಲಿಮೆಂಟಿನ ನಧಸ್ಯರ ಹೆಸರನ್ನಾಗಲೀ ಈ ಮನೆಯ ನದಸ್ಯರ ಹೆಸರನ್ನಾಗಲಿ ಪ್ರಯೋಗಮಾಡಲಿಲ್ಲ. ಆ ಉದ್ದೇಶದಿಂದ ಬಳಸಲಿಲ್ಲ. ಅವರು

ಇದ್ದುದರಿಂದ ಹೇಳಿದೆ, ಅವರು ಯಾರ ಪರವಾಗಿ ವಕಾಲತ್ತು ವಹಿಸಿದ್ದಾರೆ, ಸಮರ್ಥನೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ ಸಂತೋಷ, ನನಗೆ ಅಸಮ್ಮತಿಯಿಲ್ಲ. 1970-71 ರಲ್ಲಿ ಸೀನಿಯರ್ ಇನ್ಸ್‌ಪೆಕ್ಟರ್ ಆಫ್ ಕೋ ಆಪರೇಟೀವ್ ಫಾರ್ಮಿಂಗ್ ಅವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ. 8 ಲಕ್ಷ ರೂಪಾಯಿ ದುಡ್ಡು ಹೊಡೆದರು ಎಂದು.

ಶ್ರೀ ಎನ್. ಜಿ. ಹಾಲಪ್ಪ.—ಎಂಟು ಸೊಸೈಟಿಗಳಿವೆ.

Sri H. D. DEVEGOWDA.—I am not particular about these eight societies. I am only particular about this particular society.

5-30 P. M.

[MADAM SPEAKER in the Chair]

I am speaking with reference to Hagedanahalli Society. ಸರ್ಕಾರ ಸೊಸೈಟಿಗೆ ಕಾಂಟ್ರಿಬ್ಯೂಷನ್ ಕೊಟ್ಟಿರುವುದು 3000 ರೂಪಾಯಿ. ಎಲ್. ಟಿ. ಲೋನ್ 83,000 ರೂಪಾಯಿ.

ಶ್ರೀ ಡಿ. ದೇವರಾಜ ಅರಸ್.—ಆ ಸೊಸೈಟಿಗೆ ಯಾರು ಸೆಕ್ರೆಟರಿ? ತಮಗೆ ಗೊತ್ತಿದ್ದರೆ ಹೇಳಿ!

ಶ್ರೀ ಹೆಚ್. ಡಿ. ದೇವೇಗೌಡ.—ಗೊತ್ತಿಲ್ಲ, 1971 ರಲ್ಲಿ ರಾಜ್ಯಪಾಲರ ಆತಳಿತ ಇರುವಾಗ ಸರ್ಕಾರಿ ಅಧಿಕಾರಿ ಕೊಟ್ಟಿರುವ ರಿಪೋರ್ಟ್, ಯಾರೂ ಇನ್‌ಸ್ಪೆಕ್ಷನ್ ಮಾಡಿಕೊಟ್ಟಿರುವುದಿಲ್ಲ. ಹಿಂದಿನ ರಿಜಿಸ್ಟ್ರಾರ್ ಯಾರು ಎಂದು ಅವರ ಹೆಸರನ್ನು ಹೇಳಿದ್ದಾರೋ ಅವರು ಬಹುಶಃ 1971ಕ್ಕೆ ಮುಂಚೆ ರಿಟೈರ್ ಆಗಿ ಹೋಗಿದ್ದಾರೆ. ಹೊಸ ರಿಜಿಸ್ಟ್ರಾರ್ ಈಗ ಯಾರು ಇದ್ದಾರೆ ಅವರು ಆಗ ರಿಜಿಸ್ಟ್ರಾರ್ ಆಗಿದ್ದರು.

ಶ್ರೀ ಎನ್. ಜಿ. ಹಾಲಪ್ಪ.—ಗವರ್ನರ್ ಆಡಳಿತದಲ್ಲಿ ಶ್ರೀ ಜಮುಖಂಡಿಮಠ್ ಅವರು ರಿಜಿಸ್ಟ್ರಾರ್ ಆಗಿದ್ದರು.

ಶ್ರೀ ಎಚ್. ಡಿ. ದೇವೇಗೌಡ.—ಯಾವ ಯಾವ ಬಾಬಿಗೆ ಕೊಟ್ಟರೋ ಅಂತೂ 95 ಸಾವಿರ ರೂಪಾಯಿ ಖರ್ಚು ಮಾಡಿದ್ದಾರೆ. ಸರ್ಕಾರಿ ಅಧಿಕಾರಿ ಕೊಟ್ಟಿರತಕ್ಕ ರಿಪೋರ್ಟ್ ನನ್ನ ಕಡೆ ಇದೆ, ಸೊಸೈಟಿ ಸೂಪರ್‌ಸೀಡ್ ಮಾಡಿದ್ದರ ಬಗ್ಗೆ ಆದರಲ್ಲಿರತಕ್ಕ ಲೋಪದೋಷಗಳನ್ನು ವಿಚಾರಣೆ ನಡೆಸಬೇಕಾದರೆ ನಾನು ಏನು ಚಕಾರ ಶಬ್ದ ಎತ್ತುವುದಿಲ್ಲ. ಕಾಂಗ್ರೆಸ್ (ಒ) ಇರಲಿ, ಕಾಂಗ್ರೆಸ್ (ಆರ್) ಇರಲಿ, ಫ್ರಾಡ್ ಆಗಿರ್ತಾರೆ ವಿಚಾರಣೆ ಮಾಡಿ ಕಾನೂನು ಕಾಯಿದೆ ಪ್ರಕಾರ ನಿರ್ಣಯತೆಗೆದುಕೊಂಡು ಯಾವ ಶಿಕ್ಷೆ ಬೇಕಾದರೂ ಕೊಡಿ. ಈಗ ಹನ್ನೊಂದು ವರ್ಷದವಾದಮೇಲೆ ಕೊಟ್ಟಿದ್ದಂಥ ಭೂಮಿಯ ಗ್ರಾಂಟನ್ನು ರದ್ದು ಮಾಡಿದ್ದಾರೆ. ಅದು ಈಗ ಇರುವ ಪ್ರಾಬ್ಲಮ್ ಪ್ರಶ್ನೆ.

Sri H. SIDDAVEERAPPA.—If you have understood him correctly, ಹೊಲ ಹೊಡೆಯುವವರೇ ಬೇರೆ. ಗ್ರಾಂಟೀಸ್ ಬೇರೆ ಎಂದು ಹೇಳಿದರು.

ಶ್ರೀ ಎಚ್. ಡಿ. ದೇವೇಗೌಡ.—ಈಗ ಈ ಬಗ್ಗೆ 59 ಜನಕ್ಕೆ ನೋಟೀಸ್ ತಲುಪಿದೆ. ಇವ ಯಾರಿಗೆ ಜಮೀನು ಕೊಡಿಸಬೇಕು ಎಂದು ಇದ್ದಾರೋ ಅವರ ಪರವಾಗಿ ವಕಾಲತ್ತನ್ನು ತೆಗೆದು ಕೊಂಡಿದ್ದಾರೆ.

Sri N. G. HALAPPA.—I am sorry that is not my stand.

ಶ್ರೀ ಎಚ್. ಡಿ. ದೇವೇಗೌಡ.—ಇವರು ಯಾರಿಗೆ ಜಮೀನನ್ನು ತೆಗೆಸಿಕೊಡುವುದಕ್ಕೆ ವಕಾಲತ್ತನ್ನು ತೆಗೆದುಕೊಂಡಿದ್ದಾರೋ ಅವರ ಪರವಾಗಿ ಕೆಲಸಮಾಡುತ್ತಿದ್ದಾರೆ. ಈ ದರಖಾಸ್ತನ್ನು ರದ್ದುಮಾಡಿಸಿ ಅವರಿಗೆ ಜಮೀನನ್ನು ಕೊಡಿಸಬೇಕೆಂಬುದೇ ಇದರ ಹಿನ್ನಲೆ.

ಶ್ರೀ ಎನ್. ಜಿ. ಹಾಲಪ್ಪ.—ಕೊಟ್ಟು ಆಗಿದೆ, ಉಳಿಸಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಕೊಟ್ಟು ಆಗಿದ್ದರೆ ತಹಶೀಲ್ದಾರರು ನೋಟೀಸ್ ಕೊಡ ಬೇಕಾದುದು ಇಲ್ಲ.

ಶ್ರೀ ಎಸ್. ಎಂ. ಶೀರಾನಾಳ್ಳ ಚಂದ್ರಶೇಖರ್.—ಅವರ ಭಾಷಣದ ಸಮಯವಾದಮೇಲೆ, under Rule 59, there is no provision to substantiate it.

MADAM SPEAKER.—I know, the hon. Member cannot make a second speech. But he is seeking some clarification.

ಶ್ರೀ ಎಚ್. ಡಿ. ದೇವೇಗೌಡ.— ನೋಟೀಸ್ ಯಾರು ಕೊಟ್ಟಿರುತ್ತಾರೋ ಅವರು ಮಾತನಾಡಿದ ಮೇಲೆ ಬೇರೆಯವರು ಮಾತನಾಡಬಾರದು. ಸ್ಪೀಕರ್ ಅವರು ಅನುಮತಿ ಕೊಟ್ಟರೆ ಮಾತನಾಡಬಹುದು. ಶ್ರೀಮಾನ್ ಹಾಲಪ್ಪನವರು ಮಾನ್ಯ ಅಧ್ಯಕ್ಷರ ಅಪ್ಪಣೆಯಿಂದ ಮಾತನಾಡಿದ್ದಾರೆ. ಅವರು ಮಾತನಾಡಿದ್ದರ ಬಗ್ಗೆ ಕ್ಲಾರಿಫೈ ಮಾಡಬೇಕಾಗಿದೆ. ನಭೆ ನಿಯಮ ಪಾಲನೆ ಮಾಡಬಾರದು ಎಂದು ನನಗೆ ಅಭಿಪ್ರಾಯ ಇಲ್ಲ. ಮಾನ್ಯ ಸದಸ್ಯರಾದ ಚಂದ್ರಶೇಖರ್‌ರವರು ಈ ವಿಷಯವನ್ನು ಮನನ ಮಾಡಿಕೊಳ್ಳುವುದು ಒಳ್ಳೆಯದು. ಇವತ್ತು ಅಲ್ಲ ಪಾರ್ಟೀಸ್ ಇಲ್ಲದಿದ್ದರೆ ನೋಟೀಸ್ ಏತಕ್ಕೆ ಕೊಡಬೇಕು ? ಮಾನ್ಯ ಸದಸ್ಯರು ಇನ್ನೊಂದು ಚಾರೆಂಜನ್ನು ಹಾಕಿದರು, ಬಹಳ ಸಂತೋಷ, ಏನೆಂದರೆ, ನೀವು ಬಂದು ಅದನ್ನು ವಿಚಾರಣೆ ಮಾಡಿ ಎಂದು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ; ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಸರ್ಕಾರದ ಮಂತ್ರಿಗಳು ಸಮ್ಮತಿ ಸೂಚಿಸುವುದಾದರೆ ನಾನು ಸರ್ಕಾರದ ಮಂತ್ರಿಗಳು ಇಬ್ಬರೂ ಆ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡುತ್ತೇವೆ. ಒಂದುವೇಳೆ ಅವರು ಹೇಳಿದ್ದರಲ್ಲಿ ಸತ್ಯಾಂಶ ಇದ್ದರೆ ಅದನ್ನು ಒಪ್ಪಿಕೊಳ್ಳೋಣ. ಇದಕ್ಕೆ ಮಾನ್ಯ ಮಂತ್ರಿಗಳು ಸಮ್ಮತಿಸಬೇಕು ಎಂದು ಇಷ್ಟು ಮಾತ್ರ ಹೇಳುತ್ತೇನೆ. ಈ ಸಭೆಯಲ್ಲಿ ಇಂಥ ಸೂಚನೆ ಬಂದಾಗ ಚಾರೆಂಜಸ್, ಕೌಂಟರ್ ಚಾರೆಂಜಸ್ ಬಂದಾಗ ಅದಕ್ಕೆ ಅಧ್ಯಕ್ಷರವರು ಅಪ್ಪಣೆ ಕೊಡಬೇಕಾಗುತ್ತದೆ. ಅವರು ಏನು ಹೇಳುತ್ತಾರೋ ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇನೆ. ಈ ಬಗ್ಗೆ ಸರ್ಕಾರ ತೆಗೆದುಕೊಂಡಿರತಕ್ಕ ಕ್ರಮ ಸಾಧುವಾದುದು ಅಲ್ಲ. ಈ ಒಂದು ಶರತ್ತಿನ ಮೇಲೆ ಮಾನ್ಯ ಮಂತ್ರಿಗಳು ನಾನು ಹೇಳುವುದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದಾರೆಯೆ ?

†ಶ್ರೀ ಕೆ. ಎಚ್. ಪಾಟೀಲ್ (ಅರಣ್ಯ ಮತ್ತು ವ್ಯವಸಾಯ ಶಾಖೆಯ ಮಂತ್ರಿಗಳು).— ಮಾನ್ಯ ಸಭಾಧ್ಯಕ್ಷರೇ, ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಈ ವಿಷಯದಲ್ಲಿ ಬಹಳ ಮುತುವರ್ಜಿ ತೆಗೆದುಕೊಂಡು ಮನ ಕರಗುವಂತೆ ಮಾತನಾಡಿದ್ದಾರೆ. ಸರ್ಕಾರಕ್ಕೆ ನಿಜವಾಗಿಯೂ ಬಡವರ ಬಗ್ಗೆ ಕರುಣೆ ಇದೆಯೆಂದು ನಾನು ಬೇರೆ ಹೇಳಬೇಕಾಗಿಲ್ಲ. ಶ್ರೀಮಾನ್ ದೇವೇಗೌಡರಿಗೆ ಇದರ ಸ್ಪಷ್ಟ ಚಿತ್ರವನ್ನು ನಿಜ ಸ್ಥಿತಿಯಲ್ಲಿ ಹೇಳಿದ್ದರೆ ಅವರು ಈ ರೀತಿಯಾಗಿ ತಮ್ಮ ವಾದವನ್ನು ಈ ಸಭೆಯ ಎದುರಿಗೆ ಮುಂದುವರೆಸುತ್ತಿರಲಿಲ್ಲ ಎಂದು ನನ್ನ ಅಭಿಪ್ರಾಯ. ವಿಶೇಷವಾಗಿ ವ್ಯಕ್ತಿಗತವಾಗಿ ಪೆರೊಬ್ಬರನ್ನು ದೂಷಿಸುವುದಕ್ಕೆ ಈ ಸಭೆಯ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಇಚ್ಛೆ ಪಡುವುದಿಲ್ಲ. ಮತ್ತು ಪೋಲೀಸರ ಬಗ್ಗೆ ಹೇಳುವುದನ್ನು ಮುಖ್ಯ ಮಂತ್ರಿಗಳೇ ಹೇಳಬಹುದು, ಆ ವಿಷಯದಲ್ಲಿ ನನ್ನ ಭಾಷಣವನ್ನು ಮುಂದುವರಿಸುವುದಕ್ಕೆ ಅಪೇಕ್ಷಿಸುವುದಿಲ್ಲ.

1961—1964 ರವರೆಗೆ ಬೇರೆ ಬೇರೆ ತಾರೀಖುಗಳಲ್ಲಿ ಹೊಲಗೆಳ ವಿತರಣೆ ವ್ಯಕ್ತಿಗತವಾಗಿ ಆಗುತ್ತಾ ಬಂತು. ಅಂದರೆ 1963ನೇ ಇಸವಿಯಲ್ಲಿ ಮಾನ್ಯ ಸದಸ್ಯರು ಹೇಳಿದಂತೆ ಕೋ ಆಪರೇಟಿವ್ ಸೊಸೈಟಿಯು ಪ್ರಾರಂಭವಾಯಿತು. ಈ ಅವಧಿಯಲ್ಲಿ ಅನೇಕ ಜನ ವ್ಯಕ್ತಿಗತವಾಗಿ ಜಮೀನನ್ನು ಸಾಮೂಹಿಕವಾಗಿ ಕೊಡಿಸಿ ಆ ಜಮೀನನ್ನು ಸಹಕಾರ ಸಂಘದ ಮುಖಾಂತರ ಮಾಡೋಣ ಎನ್ನುವ ಅಭಿಪ್ರಾಯದಿಂದ ಸಂಘ ರಿಜಿಸ್ಟರ್ ಆಯಿತು. ನಿಜವಾಗಿಯೂ ಅಲ್ಲಿ ನಡೆಯತಕ್ಕ ವ್ಯವಹಾರವನ್ನು ನೋಡಿದರೆ, 1965ರಿಂದ ಇಲ್ಲಿಯವರೆಗೆ ಯಾವ ಯಾವ ಕಾಲಕ್ಕೆ ಅಧಿಕಾರಿಗಳಿಂದ ರಿಪೋರ್ಟುಗಳು ಬಂದಿವೆಯೋ ಅವುಗಳೆಲ್ಲವನ್ನೂ ನೋಡಿದರೂ ಸಹಿತ ಸಮಂಜಸವಾದ ವ್ಯವಹಾರ ನಡೆದಿಲ್ಲ, ದುರ್ವ್ಯವಹಾರ ನಡೆದಿದೆ. ಸಾಲ ಇರತಕ್ಕ ಸದಸ್ಯರಿಗೆ ಬೇರೆ ಸದಸ್ಯರ ಹೆಸರಿನಿಂದ ಹಣವನ್ನು ಸ್ವೀಕರಿಸಿದ ಜನತೆಯೇ ಬೇರೆ, ಈ ರೀತಿ ಆ ಸಂದರ್ಭದಲ್ಲಿ ಮಾಡಿದ್ದು ಎಂದು ಕಾಣುತ್ತದೆ. ಇವತ್ತಿನ ದಿವಸ ರಾಜಕೀಯ ಬಣ್ಣವನ್ನು ಇಂಥ ವಿಷಯದಲ್ಲಿ ಬಳಿಯುವುದು ಸಮಂಜಸವಲ್ಲ ಎಂದು ಮಾನ್ಯ ದೇವೇಗೌಡರ ಗಮನಕ್ಕೆ ತರುತ್ತೇನೆ. ಇಂದು ತಾವು ಇದಕ್ಕೆ ರಾಜಕೀಯ ಬಣ್ಣವನ್ನು ಬಳಿಯಬಹುದು, ಅಂದು ರಾಜ್ಯಭಾರ ಮಾಡಿರತಕ್ಕ ಜನ, ಆ ಸಂಘದಲ್ಲಿರತಕ್ಕ ಜನ, ಇಬ್ಬರೂ ಒಂದೇ ಆಗಿದ್ದಾರೆ. ಅಧಿಕಾರಿಗಳು ಅವರ ವಿರುದ್ಧ ರಿಪೋರ್ಟು ಮಾಡಿದಾಗ, ಮೇಲಿನ ಅಧಿಕಾರಿಗಳು ಪುನಃ ಅವರಿಗೆ ಸಾಲವನ್ನು ಕೊಡಲು ಒತ್ತಾಯ ಮಾಡಿದ್ದನ್ನು ನೋಡಿದರೆ.....

ಶ್ರೀ ಎಚ್. ಡಿ. ದೇವೇಗೌಡ.—ಯಾವ ಜನ ?

ಶ್ರೀ ಕೆ. ಎಚ್. ಪಾಟೀಲ್.—1963 ರಿಂದ 69-70ನೇ ಇಸವಿಯವರೆಗೂ ಅಧಿಕಾರಿಗಳು ರಿಪೋರ್ಟನ್ನು ಮತ್ತು ಆಡಳಿತದ ವರದಿಯನ್ನು ಮಾಡಿದರೂ ಪುನಃ ಪುನಃ ಮೇಲಿಂದ ಸಾಲವನ್ನು ಕೊಡಿ ಎಂದು ಸೆಂಟ್ರಲ್ ಬ್ಯಾಂಕಿಗೆ, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಆದೇಶ ಹೋಗಿದೆ. ಅದಕ್ಕೆ ಅನುಗುಣವಾಗಿ 91 ಸಾವಿರ ರೂಪಾಯಿ ಕೊಡಲ್ಪಟ್ಟಿದೆ. ಕೊಟ್ಟಂಥ ಸಾಲವನ್ನು ಸರಿಯಾಗಿ ವಿನಿಯೋಗಿಸಿದ್ದೇ ಆದರೆ, ಬೋವಿಗಳು, ದಾಸರು ಆಗಲೇ ಇವೊತ್ತಿನ ದಿವಸ ಉತ್ತಮ ಸ್ಥಿತಿವಂತ ರಾಗುತ್ತಿದ್ದರು. ಕೊಟ್ಟಂಥ ಹಣವೂ ಸಹಿತ ಅವರ ಕೈಗೆ ಮುಟ್ಟಿಸಲಾರದೆ ಇದ್ದುದರಿಂದಲೂ, ಬೇರೆ ಬೇರೆ ರೀತಿಯಲ್ಲಿ ವಿನಿಯೋಗಿಸಿದ್ದರಿಂದಲೂ ಈ ಪರಿಸ್ಥಿತಿಗೆ ಅವಕಾಶವಾಯಿತು. ರೆವಿನ್ಯೂ ಇಲಾಖೆ ಕೊಟ್ಟ ಜಮೀನನ್ನು ಅರಣ್ಯ ಇಲಾಖೆ ರೆಗ್ಯುಲರೈಜ್ ಮಾಡಬೇಕಾಗಿತ್ತು. ಸಮಾಜವಾದಿ ಸರಕಾರ ಬಡವರ ಉದ್ಧಾರ ಮಾಡುವುದಾಗಿ ಹೇಳಿ ಸಮಾಜಘಾತಕವಾಗುವ ರೀತಿ ಮಾಡಿದೆ ಎಂದು ಹೇಳುವುದಕ್ಕೆ ವ್ಯಸನವಾಗುವುದು. ಕೊಟ್ಟಿದ್ದು ತಪ್ಪು ಎಂದು ಅರ್ಥ ಮಾಡಿದವರಾಗಲೀ ಅಥವ ವಶಕ್ಕೆ ತೆಗೆದುಕೊಳ್ಳಬೇಕೆಂದು ಆರ್ಡರು ಮಾಡಿದವರಾಗಲೀ ಈ ಸರಕಾರದವರಲ್ಲ. ಆಗ ಇದ್ದ ಸರಕಾರ ಇದನ್ನು ಮಾಡಿದೆ. ತಪ್ಪು ತಿಳಿದು ಅರಣ್ಯದ ಜಮೀನನ್ನು ರೆಸ್ಟೋರ್ ಮಾಡಬೇಕೆಂದು ಆರ್ಡರು ಮಾಡಿದ್ದಾರೆ. 1971ರ ಪೂರ್ವದಲ್ಲಿ ಇದಾಗಿದೆ. 21-10-71ರಲ್ಲಿ ಅರಣ್ಯದ ಜಮೀನನ್ನು ಕೊಟ್ಟಿರುವುದರಿಂದ ಕೊಟ್ಟಿರುವ ಜಮೀನನ್ನು ವಾಪಸು ಪಡೆಯಬೇಕೆಂದು ಸರಕಾರ ಆಜ್ಞೆ ಮಾಡಿದೆ. ನಮ್ಮ ಸರಕಾರ ಆಗ ಇರಲಿಲ್ಲ. ನಮ್ಮ ಸರಕಾರವಾದರೆ ವಿಚಾರಣೆ ಮಾಡಿ ಸರಿಯಾಗಿದ್ದರೆ ಖಾಯಂ ಮಾಡುತ್ತಿದ್ದೆವು, ಇಲ್ಲದಿದ್ದರೆ ತಪ್ಪು ಮಾಡಿದವರಿಗೆ ದಂಡನೆ ಮಾಡುತ್ತಿದ್ದೆವು. ಆದು ಬೇರೆ ವಿಚಾರ. ನಾವು ಬರುವುದರೊಳಗೆ ಹಿಂದಿದ್ದ ಸರಕಾರ ತಾನು ಮಾಡಿದ ತಪ್ಪನ್ನು ತಿದ್ದಿಕೊಂಡು ಆಜ್ಞೆ ಮಾಡಿದೆ. ಹಿಂದಿನ ಸರಕಾರದ ಆಜ್ಞೆಯನ್ನು ಅನುಕರಣೆ ಮಾಡುವುದು ನಮ್ಮ ಕರ್ತವ್ಯ. ರೆವಿನ್ಯೂ ಅಧಿಕಾರಿಗಳು ಷೋಕಾಸ್ ನೋಟೀಸು ಕೊಟ್ಟಿದ್ದಾರೆ, ಅದು 10-10-72 ರಲ್ಲಿ ಜಾರಿಯಾಗಿದೆ. ಇದು ವಾಸ್ತವಿಕ ಅಂಶ. ಅಧಿಕಾರಿಗಳು ತಪ್ಪು ಮಾಡಿದ್ದರೆ ಎಂಬ ಭಾವನೆ ಇದ್ದರೆ ಹೊಲ ಬೇಕಾದವರು ನನಗೆ ಅಥವಾ ಅಧಿಕಾರಿಗಳಿಗೆ ಅರ್ಜಿ ಕೊಡಬಹುದಾಗಿತ್ತು. ಅಲ್ಲಿ ಶ್ರೀ ಹಾಲಪ್ಪನವರು ಹೇಳಿದಂತೆ ಎರಡು ಪಕ್ಷಗಳು ಮೊದಲಿನಿಂದ ಇವೆ, ಬೋವಿಗಳದು ಒಂದು ಗುಂಪು, ದಾಸರದು ಒಂದು ಗುಂಪು ಇದೆ. ಆ ಗುಂಪುಗಳವರು ತಾವು ಪ್ರಬಲವಾಗಬೇಕೆಂದು ಪ್ರಯತ್ನ ಪಡುತ್ತಿರುವಾಗ ಮೂರನೆಯ ಒಂದು ಗುಂಪು ಪ್ರಬಲವಾಗಿದೆ. ಇದನ್ನು ತಿಳಿದುಕೊಳ್ಳಬೇಕು ಎಂಬ ಇಚ್ಛೆ ಇದೆ.

ಏನೇ ಆಗಲಿ ಪುನರ್ ಪರಿಶೀಲನೆ ಮಾಡಬೇಕೆಂದು ಹೇಳಿದರು. ಏನು ಪರಿಶೀಲಿಸಬೇಕು? 1970 ರಲ್ಲಿ ಮಾಡಿರುವ ಆಜ್ಞೆಯನ್ನು ಪುನರ್‌ಪರಿಶೀಲನೆ ಮಾಡಬೇಕೆಂದರೆ ಯಾವ ರೀತಿ ಮಾಡಬೇಕೆಂದು ನಿಲಹೆ ಮಾಡಬೇಕು. ಅವರಿಗೆ ಅದನ್ನು ಬಿಟ್ಟು ಬೇರೆ ಜಮೀನು ಕೊಡಬಹುದು ಎಂದು ಹಾಲಪ್ಪನವರು ಮತ್ತು ದೇವೇಗೌಡರು ಹೇಳಿದರೆ ಅದಕ್ಕೆ ಅವಕಾಶವಿದ್ದರೆ ಪರಿಶೀಲಿಸೋಣ. ಜಮೀನಿಲ್ಲದಿರುವವರು ಲಕ್ಷಗಟ್ಟಲೆ ಇದ್ದಾರೆ. ಎಲ್ಲರಿಗೂ ಒಂದೊಂದು ಎಕರೆ ಕೊಟ್ಟರೆ ಮೈಸೂರಿನಲ್ಲಿ ಅರಣ್ಯವೇ ಉಳಿಯುವುದಿಲ್ಲ. ಹಾಗೆ ಮಾಡುವುದರಿಂದ ಜನರಿಗೆ ಒಳ್ಳೆಯದಾಗುವುದಿಲ್ಲ, ಅದು ಬೇಡ. ರಾಜ್ಯದ ಅರಣ್ಯ ಹೇಗಿದೆಯೋ ಹಾಗೆ ಇರುವಂತೆ ಅವನ್ನು ಉಳಿಸೋಣ. ಇದು ಸ್ವಲ್ಪ ನಿಷ್ಠೂರವಾಗಿ ಕಂಡರೂ ರಾಜ್ಯದ ಹಿತದೃಷ್ಟಿಯಿಂದ ಜನರ ಹಿತದೃಷ್ಟಿಯಿಂದ ಅರಣ್ಯವನ್ನು ಕಾಪಾಡುವುದು ಸೂಕ್ತ, ಅದಕ್ಕೆ ಮಾನ್ಯ ಸದಸ್ಯರ ಬೆಂಬಲ ಬೇಕು.

ಇದರ ಜೊತೆಗೆ ಅನೇಕ ಕಡೆ ಸಹಕಾರ ಸಂಘಗಳ ಹೆಸರಿನಲ್ಲಿ ನಮ್ಮ ಹಣ ದುರುಪಯೋಗ ವಾಗಿದೆ ಎಂದು ತಿಳಿದುಬಂದಿದೆ. ದುರುಪಯೋಗ ಮಾಡಿದವರು ಚೆನ್ನಾಗಿದ್ದಾರೆಂದು ಹೇಳುತ್ತಿದ್ದಾರೆ. ಸೆಂಟ್ರಲ್ ಬ್ಯಾಂಕಿನ ಮೇಲೆ ಆಪಾದನೆಯಿದೆ, ಘೋರ ಅಪಾದನೆ ಮಾಡಿದ್ದಾರೆ, ಅದನ್ನು ತಿಳಿಸಿದ್ದಕ್ಕೆ ಅಭಿನಂದಿಸುತ್ತೇನೆ. ಅದರ ಬಗ್ಗೆ ತೀವ್ರ ತನಿಖೆಮಾಡಿ ಎಂದು ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ. ಇನ್ನು ಪೋಲೀಸ್ ಅಟ್ರಾಸಿಟೀಸ್ ಮತ್ತಿತರ ವಿಷಯಗಳ ಬಗ್ಗೆ ಮುಖ್ಯ ಮಂತ್ರಿಗಳು ಹೇಳುವರು ಎಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅರಣ್ಯ ಸಚಿವರು 1970ರ ಆರ್ಡರನ್ನು ಈಗ ನಜರಿಗೆ ತಂದಿದ್ದೇವೆಂದು ಹೇಳಿದರು. ಸಂಬಂಧಪಟ್ಟ ರಿಕಾರ್ಡನ್ನು ಈ ಸಭೆಯ ಟೇಬಲ್ ಮೇಲಿಟ್ಟರೆ ಒಳ್ಳೆಯದು. ಕಾಂಟ್ರೊವರ್ಸೀಸ್ ಬಂದಿವೆ, 1962 ರಲ್ಲಿ ಗ್ರಾಂಟ್ ಆಗಿರುವುದು, ಅಂದಿನ ಸರಕಾರ ತನ್ನ ತಪ್ಪನ್ನು ತಿಳಿದುಕೊಂಡು 1970ರಲ್ಲಿ ರದ್ದುಮಾಡಿದೆ. 10—10—1972ರಲ್ಲಿ ನಜರಿಗೆ ತಂದಿರುವುದಾಗಿ ಹೇಳಿದ್ದಾರೆ. ಅದನ್ನು ಸಭೆಯ ಟೇಬಲ್ ಮೇಲಿಟ್ಟರೆ ವೆರಿಫೈ ಮಾಡಲು ಅನುಕೂಲವಾಗುತ್ತದೆ.

(ಶ್ರೀ ಎಚ್. ಡಿ. ದೇವೇಗೌಡ)

ಎರಡನೆಯದಾಗಿ ಒಂದು ಕಡೆ ಬೋವಿ ಜನಾಂಗ, ಇನ್ನೊಂದು ಕಡೆ ದಾನರ ಜನಾಂಗ ಇದೆ, ಮೂರನೆಯದು ಇನ್ನೊಂದಿದೆ ಎಂದು ಹೇಳಿದರು. ಹಾಲಪ್ಪನವರು ಥ್ರಾಲೆಂಜ್ ಮಾಡಿದ್ದಾರೆ,ಸ್ಥಳದಲ್ಲಿ ಪರಿಶೀಲನೆಯಾಗಬೇಕೆಂದು ಹೇಳಿದ್ದಾರೆ. ಅದನ್ನು ಸ್ವಾಗತಿಸುತ್ತೇನೆ. ಒಂದುವೇಳೆ ಬಹಳ ನಿಷ್ಪಕ್ಷಪಾತವಾದ ನಿರ್ಣಯ ತೆಗೆದುಕೊಳ್ಳದೆ ಸರಕಾರದ ಮೇಲೆ ಆಪಾದನೆ ಮಾಡಿದರೆ ವಿರೋಧ ಪಕ್ಷದ ನಾಯಕರು ಹೀಗೆ ಮಾಡಿದರೆಂದು ಹೇಳುವರು. ಆದುದರಿಂದ ಸ್ಥಳ ಪರಿಶೀಲನೆ ಮಾಡಿದ ಮೇಲೆ ನನಗೆ ಸಮಾಧಾನವಾದ ಮೇಲೆ ನನ್ನ ಅಭಿಪ್ರಾಯವನ್ನು ಈ ಸಭೆಯಲ್ಲಿ ವ್ಯಕ್ತಪಡಿಸುತ್ತೇನೆ. With this condition-I offer this challenge, the Agriculture Minister, myself and Mr. Halapppa-let us go to the spot; we shall verify all these things whatever you say; if it is according to what he says, I am going to apologise in this House. At least to that I think the Hon'ble Minister will concede.

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈಗ ನಾನು ಹೇಳಬೇಕಾದ ಪ್ರಮೇಯವೇನೂ ಇರಲಿಲ್ಲ. ಶ್ರೀ ದೇವೇಗೌಡರ ಸೂಚನೆಯಲ್ಲಿ ಈ ರೀತಿ ಇದೆ:—

> "to rais a discussion regarding the eviction order issued by the Government on the villagers of Hagedahalli, Channagiri Taluk, from the lands they are occupying since 1961."

ತಾವು ಕೂಡ ಇದನ್ನು ನನಗೆ ರೆಫರ್ ಮಾಡಲಿಲ್ಲ. ಇಲ್ಲಿ ಬಂದಮೇಲೆ ಪೋಲೀಸ್ ವಿಚಾರದಲ್ಲಿ ಏನಾಗಿದೆ ಎಂಬುದನ್ನು ಹೇಳಿದ್ದಾರೆ.ಅದನ್ನೂ ತಾವು ತಿಳಿಸಿದ್ದರೆ ಅಲ್ಲಿಏನು ನಡೆದಿದೆ ಅನ್ನುವುದನ್ನುನೋಡಿ ತಮಗೆ ಅದರವಿಚಾರವನ್ನೂ ಕೂಡ ತಿಳಿಸುತ್ತಿದ್ದೆ.ನಾನು ಇದನ್ನು ನೇರವಾಗಿ ನೊಡಬೇಕಾದ ಅಗ್ಯತ್ಯ ವಿರಲಿಲ್ಲ.ಆದರೆ ಪೋಲೀಸಿನವರು ಅತ್ಯಾಚಾರ ಮಾಡಿದರೆಂದು ಒಂದು ಆಪಾದನೆಯನ್ನು ಹೇಳಿದ್ದಾರೆ. ಅಲ್ಲಿ ಇಬ್ಬರು ಪೋಲೀಸ್ ಕಾನ್‌ಸ್ಟೆಬರ್‌ಗಳನ್ನು ಸಸ್‌ಪೆಂಡ್ ಕೂಡ ಮಾಡಿದ್ದಾರೆಂದು ಹೇಳಿದರು. ಆದರೆ ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳುತ್ತಿದ್ದಾರೆ ಆ ಕಾರ್ಯ ಆಗಲೆ ಅಲ್ಲಿ ನಡೆದು ಪೂರ್ತಿಸಿಬಿಟ್ಟಿದೆ ಅನ್ನತಕ್ಕ ಮಟ್ಟದಲ್ಲಿ ಅವರು ಹೇಳುತ್ತಿದ್ದಾರೆ. ಜನರು ವಿರೋಧಪಕ್ಷದ ನಾಯಕರ ಹತ್ತಿರ ಬಂದು ಏನೇನೋ ಹೇಳುತ್ತಾರೆ. ಆದರೆ ಅವರು ಬಂದು ತಿಳಿಸತಕ್ಕದ್ದೆಲ್ಲಾ ಸತ್ಯವಾದದರ ಎಂಬುದಾಗಿ ಮಾನ್ಯ ವಿರೋಧಪಕ್ಷದ ನಾಯಕರು ಏಕ್‌ದಂ ಒಂದು ತೀರ್ಮಾನಕ್ಕೆ ಬರಬಾರದು; ದಯವಿಟ್ಟು ಹಾಗೆ ಮಾಡಬೇಡಿ ಎಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಯಾರು ಏನೇ ವಿಚಾರ ತಿಳಿಸಿದರೂ ಅವರು ತಿಳಿಸತಕ್ಕದ್ದೆಲ್ಲಾ ನಿಜವೇ ಎಂದು ಭಾವಿಸಬಾರದು. ಹಾಗೆ ಅವರು ಅಲ್ಲಿ ಆರೋಪಣೆಗೆ ಒಳಗಾಗಿದ್ದರೆ, ತಪ್ಪನ್ನು ಮಾಡಿದ್ದರೆ ಅವರಿಗೆ ಖಂಡಿತವಾಗಿ ಶಿಕ್ಷೆ ಮಾಡೋಣ. ಅಲ್ಲಿ ಅವರಿಗೆ ಪ್ರೊಟೆಕ್ಷನ್ ಕೂಡ ಕೊಡಬೇಕೆಂಬ ಮಾತೂ ಬಂದಿತ್ತು. ಸರ್ಕಾರದವರಿಗೆ ಗೊತ್ತಾಗದೆ ಇದ್ದಂಥ ಕೆಲವು ವಿಷಯಗಳು ವಿರೋಧ ಪಕ್ಷದ ನಾಯಕರಿಗೆ ತಿಳಿಯಬಹುದು. ಅಂಥ ವಿಚಾರಗಳನ್ನು ಅವರು ಸರ್ಕಾರದವರ ಗಮನಕ್ಕೆ ತಂದರೆ ನಾವು ಆದನ್ನು ಎಲ್ಲ ಮರೆಮಾಚಿ ಬಿಡುತ್ತೇವೋ ಅನ್ನತಕ್ಕ ಅನುಮಾನ ಅವರಿಗೆ ಇರಬಹುದು. ಆದರೆ ಅಂಥ ವಿಚಾರಗಳಲ್ಲಿ ಮರೆಮಾಚದೆ ಇದ್ದದ್ದನ್ನು ಇದ್ದಂತೆ ಅವರಿಗೆ ತಿಳಿಸಬೇಕಾದ್ದು ಸರ್ಕಾರದವರ ಕರ್ತವ್ಯ. ಅವರಿಗೆ ಸಮಾಧಾನಕರ ವಾಗತಕ್ಕ ರೀತಿಯಲ್ಲೇ ಅವರಿಗೆ ಉತ್ತರವನ್ನು ಒದಗಿಸಲಾಗುತ್ತದೆ. ಆದರೆ ಈ ವಿಚಾರದಲ್ಲಿ ಹಿಂದೆ ಆಗಲೇ ಸರ್ಕಾರದವರು ಒಂದು ಆಜ್ಞೆಯನ್ನು ಮಾಡಿದ್ದಾರೆ. ಅದು ನಮ್ಮ ಅವಧಿಯಲ್ಲಿ ಮಾಡಿದ ಆಜ್ಞೆ ಅಲ್ಲ. ಅದನ್ನು ಯಾರು ಮಾಡಿದರು ಅನ್ನುವುದು ಈಗಿನ ಮುಖ್ಯ ಪ್ರಶ್ನೆಯಲ್ಲ. ಆದರೆ ತಾವು ಹೇಳಿದ್ದಕ್ಕೆ ನಾನು ಕಥ್ಯಾಹಾರವಾಗಿ ಇದನ್ನು ಹೇಳಿದೆ.

ಶ್ರೀ ಎಚ್. ಡಿ. ದೇವೇಗೌಡ.—ಅವರು ನನ್ನನ್ನು ಬಹಳ ಲಘುವಾಗಿ ಭಾಷಣ ಮಾಡಿದ್ದರೆಂದು ಹೇಳಿದರು. ಆದಕ್ಕಾಗಿ ನಾನು ಹೇಳಿದೆ.....

ಶ್ರೀ ಡಿ. ದೇವರಾಜ್ ಅರಸ್.—ಈಗ ತಾವು ದಯವಿಟ್ಟು ನಾನು ಹೇಳುವುದನ್ನೂ ಕೇಳಿ ತಮ್ಮಲ್ಲಿ ನನ್ನ ಒಂದು ಸವಿನಯ ಪ್ರಾರ್ಥನೆ ಏನೆಂದರೆ ತಾವು ಯಾರು ತಮ್ಮಲಿಗೆ ಬಂದು ಏನೇ ಹೇಳಲಿ ಆ ವಿಚಾರದಲ್ಲಿತಾವು ಮೊದಲೇ ಒಂದು ಕನ್‌ಕ್ಲೂಜನ್ನಿಗೆ ಬರಬೇಡಿ, ತಾವು ವಿಷಯಗಳನ್ನು ತಿಳಿಸತಕ್ಕವರಿಗೆ ಚುರುಕಾದ ಪ್ರಶ್ನೆಗಳನ್ನು ಹಾಕಿ ಸರಿಯಾದ ವಿಷಯ ಸಂಗ್ರಹಣೆ ಮಾಡಿ. ತಾವು ವಿರೋಧಪಕ್ಷದ ನಾಯಕರಾಗಿ ಸರ್ಕಾರದಲ್ಲಿ ಕಂಡುಬರತಕ್ಕ ಲೋಪದೋಷಗಳನ್ನು ತಿಳಿಸಿದರೆ

ಅದನ್ನು ತಿದ್ದಿ ಸರಿಪಡಿಸಿಕೊಳ್ಳುವುದು ಸರ್ಕಾರದವರ ಆದ್ಯಕರ್ತವ್ಯ. ಆದರೆ ಮಾನ್ಯ ಸದಸ್ಯರು ಏಕದಂ ತೀರ್ಮಾನಕ್ಕೇ ಬರಬಾರದು. ಆ ಜನರು ತಮ್ಮ ಬಳಿ ಬಂದು ಏನು ಹೇಳಿದ್ದಾರೆಯೋ ಅವರೇ ತಾಲ್ಲೂಕ್ ಪ್ರತಿನಿಧಿಗಳಲ್ಲೂ ಕೆಲವು ವಿಚಾರಗಳನ್ನು ತಿಳಿಸಿದ್ದಾರೆ. ನಮ್ಮಲ್ಲಿರತಕ್ಕ ವರದಿಯು ಪ್ರಕಾರ ಪಂಚಾಕ್ಷರಪ್ಪ ಅನ್ನತಕ್ಕವರು ಒಬ್ಬರು ಆ ಸೊಸೈಟಿಯ ಅಧ್ಯಕ್ಷರು. ಅವರು ಅಧ್ಯಕ್ಷರಾಗಿ ಜನರಿಗೆ ಮೋಸ ಮಾಡಿದ್ದಾರೆ ಎಂದು ದೂರನ್ನು ಕೊಟ್ಟಿರತಕ್ಕದ್ದು ನನ್ನಲ್ಲಿದೆ. ಅವರ ಮೇಲೆ ಇವರೇನು ಮಾಡುವುದಕ್ಕೆ ಹೊರಟ್ಟಿದಾರೆಂಬುದೂ ಅದರಿಂದಲೇ ವೇದ್ಯವಾಗುತ್ತಿದೆ. ಅಲ್ಲಿ ಇಬ್ಬರು ಪೋಲೀಸಿನವರನ್ನು ಸಸ್‌ಪೆಂಡ್ ಮಾಡಿದ್ದಾರೆ. ಅವರ ಗ್ಯಾಂಟನ್ನು ಕ್ಯಾನಸಲೇಷನ್ ಮಾಡುವುದಕ್ಕೆ ಹೇಳಿದ್ದಾರೆ. ನಮ್ಮ ಶ್ರೀ ಹಾಲಪ್ಪನವರೂ ಕೂಡ ಈ ವಿಚಾರದಲ್ಲಿ ತಮ್ಮಗೆ ತೋಚಿದ್ದನ್ನು ಹೇಳಿದ್ದಾರೆ. ಆದರೆ ನಾಳೆ ಈ ಮೂವರನ್ನು ಒಟ್ಟಿಗೆ ಕಳುಹಿಸಿದಾಗ ಒಬ್ಬರು ಹೇಳಿದ್ದನ್ನು ಇನ್ನೊಬ್ಬರು ಇವರಿವರಲ್ಲೇ ಒಪ್ಪದಿದ್ದರೆ ಆಗೇನು ಮಾಡುವುದು ಅನ್ನುವುದು ನನ್ನ ಭಯ.

ಶ್ರೀ ಎಚ್. ಡಿ. ದೇವೇಗೌಡ.—ಹಾಗಾದರೆ ಮಾನ್ಯ ಸಭಾಧ್ಯಕ್ಷರನ್ನೂ ಕಳುಹಿಸಿ ಕೊಡಿ.

ಶ್ರೀ ಡಿ. ದೇವರಾಜ್ ಅರಸ್.—ಆದರೆ ನನಗೆ ಶ್ರೀ ದೇವೆಗೌಡರಲ್ಲಿ ಆಂಥ ಅಪನಂಬಿಕೆಯೇ ನಿಲ್ಲ. ಶ್ರೀಮಾನ್ ಹಾಲಪ್ಪನವರ ಬಗ್ಗೆಯೂ ನನಗೆ ಗೌರವ ಇದೆ. ಅವರ ಬಗ್ಗೆಯೂ ನನಗೆ ಅಪನಂಬಿಕೆ ಇಲ್ಲ. ಆದರೆ ಶ್ರೀ ದೇವೇಗೌಡರು ಭಾಷಣ ಮಾಡತಕ್ಕ ಕಾಲದಲ್ಲಿ ಅವರ ಬಗ್ಗೆ ಒಂದು ವ್ಯಂಗಾರ್ಥ ಬರತಕ್ಕ ರೀತಿಯಲ್ಲಿ ಒಂದು ಪದವನ್ನು ಬಳಸಿದರು. ಆದರೆ ಅದು ಅಂಥಾ ಭಾರಿಟಿ ಬಲ್ಲಾದ ಪದವಲ್ಲ ಎಂದು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀ ಹಾಲಪ್ಪನವರೂ ಮತ್ತು ಮಾನ್ಯ ದೇವೇಗೌಡರೂ ಇಬ್ಬರೂ ಹೋಗಲಿ.....

ಶ್ರೀ ಎನ್. ಜಿ. ಹಾಲಪ್ಪ.—ಮಾನ್ಯ ದೇವೇಗೌಡರು ನನ್ನ ಜೊತೆಯಲ್ಲಿ ಬರಲಿ, ಸ್ವಾಮಿ...

ಶ್ರೀ ಎಚ್. ಡಿ. ದೇವೇಗೌಡ.—ನಾನೂ ಮತ್ತು ಶ್ರೀ ಹಾಲಪ್ಪನವರೂ ಇಬ್ಬರೂ ಹೋಗಲ ಎಂದರೆ ನಮ್ಮಲ್ಲಿ ಯಾರಲ್ಲೂ ರೆಕಾರ್ಡೇ ಇರುವುದಿಲ್ಲ. ಅದು ಮಂತ್ರಿಗಳಲ್ಲಿರುತ್ತದೆ. ಆದರೆ ಈ ವಿಚಾರದಲ್ಲಿ ನಾನು ಯಾರಿಂದಲೂ ಫೀಜನ್ನು ತೆಗೆದುಕೊಂಡಿಲ್ಲ, ಯಾರ ಬಗ್ಗೆ ನಾನು ವಕಾಲತ್ತನ್ನೂ ವಹಿಸಿಕೊಂಡಿಲ್ಲ. ಅದುದರಿಂದ ಮಾನ್ಯ ಮಂತ್ರಿಗಳೂ ಕೂಡ ನಮ್ಮ ಜೊತೆಯಲ್ಲಿ ಬರಬೇಕಾಗುತ್ತದೆ. ಈಗ ಪೇಳೆ ಇಲ್ಲ ಅನ್ನುವುದಾದರೆ ಈ ಅಧಿವೇಶನ ಮುಕ್ತಾಯವಾದ ಬಳಿಕ ಒಂದು ದಿನ ಮಂತ್ರಿಗಳು ಪ್ರೋಗ್ರಾಮನ್ನು ನಿರ್ಧರಿಸಲಿ, ನಾನೂ ಬರುತ್ತೇನೆ.

6.00 P. M.

ಶ್ರೀ ಡಿ. ದೇವರಾಜ್ ಅರಸ್.—ಹಾಗಾದರೆ ಮಂತ್ರಿಗಳ ಬಗ್ಗೆ ಏನೂ ವ್ಯಾಖ್ಯಾನ ಇರುವುದಿಲ್ಲ ತಾನೆ ? ಮುಂದೆ ತಾವು ಮಂತ್ರಿಗಳು ಮಾಡಿದ್ದೇ ಸರಿಯಲ್ಲ ಎಂದು ಹೇಳಿದರೇ ? ನಾನು ಆದರ ಬಗ್ಗೆ ಮುಚ್ಚುಮರೆ ಮಾಡುವುದು ಏನೂ ಇಲ್ಲ. ಈ ಸಭೆ ಮುಗಿದ ಮೇಲೆ ಯಾವತ್ತಾದರೂ ಮಂತ್ರಿಗಳು ಟೂರ್ ಪ್ರೋಗಾಂ ಹಾಕಿಕೊಳ್ಳುತ್ತಾರೆ. ಆಗ ಅಲ್ಲಿ ನೀವೂ ಅವರೂ ಸೇರಿ, ಅಲ್ಲಿ ಏನಾಗಿದೆ, ಏನೇನು ಆಗಬೇಕೆಂಬ ಬಗ್ಗೆ ಎಲ್ಲ ವಿಷಯಗಳನ್ನೂ ಚರ್ಚೆ ಮಾಡಬಹುದು. ಆದರೆ ನಿಪ್ಪೊಡನೆ ಇನ್ನು ಯಾರನ್ನೂ ಬೆರೆಸಿಕೊಳ್ಳುವುದು ಬೇಡ. ಹಾಗಾಗುವುದಾದರೆ ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ.

MADAM SPEAKER.—The House will now rise and meet again tomorrow at 1-00 P M.

The House Adjourned at Two Minutes past Six of the Clock to meet again at One of the Clock on Thursday, the 7th December 1972.

WD 18767--GPB—550—12-12-1973